ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಮಾರ್ಚ್ 08, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 00 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



**ಕಲ್ಲಂಗಡಿ ...** ಶುಕ್ರವಾರ ಶಿವರಾತ್ರಿ ಆಚರಣೆ ಹಿನ್ನೆಲೆಯಲ್ಲಿ ದಾವಣಗೆರೆಯಲ್ಲಿ ಕಲ್ಲಂಗಡಿ ಹಣ್ಣುಗಳಿಗೆ ಬೇಡಿಕೆ ಹೆಚ್ಚಾಗಿತ್ತು.



**ಕಾಳಗ ...** ದಾವಣಗೆರೆ ವಿನೋಬನಗರದ ಚೌಡೇಶ್ವರಿ ಜಾತ್ರೆ ಅಂಗವಾಗಿ ಗುರುವಾರ ಪಿ.ಬಿ. ರಸ್ತೆಯ ಅರುಣಾ ಟಾಕೀಸ್ ಎದುರಿನ ಮೈದಾನದಲ್ಲಿ ಭಾರೀ ಟಗರಿನ ಕಾಳಗ ನಡೆಯಿತು.

## ವಚನ ವಿವಿ ಸ್ಥಾಪನೆ: ಸಿಎಂ

### ಬಸವ ಕಲ್ಯಾಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ಸಿದ್ದರಾಮಯ್ಯ

ಬೆಂಗಳೂರು, ಮಾ. 7 - ಮುಂದಿನ ವರ್ಷ 'ವಚನ ವಿಶ್ವವಿದ್ಯಾಲಯ' ಸ್ಥಾಪನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕನೆಂದು ಘೋಷಿಸಿದ ನಿರ್ಣಯಕ್ಕಾಗಿ ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. 160 ಮಂದಿ ಶರಣ ಸ್ವಾಮೀಜಿಗಳು, ಗುರುಗಳು ಹಾಗೂ ವೀರಶೈವ - ಲಿಂಗಾಯತ ಮಠಾಧೀಶರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಜಾತಿ ಪದ್ಧತಿ, ಅಸ್ಪೃಶ್ಯತೆ, ಅಸಮಾನತೆ, ಶೋಷಣೆ ಹಾಗೂ ಧಾರ್ಮಿಕ ಡಂಭಾಚಾರದ ವಿರುದ್ಧ ಬಂಡೆದ್ದ ಬಸವಾದಿ ಶರಣರು ಜನರಲ್ಲಿ ವಚನಗಳ ಮೂಲಕ ಅರಿವು ಮೂಡಿಸಿದರು ಎಂದು ಮುಖ್ಯಮಂತ್ರಿ ಹೇಳಿದರು.

ವಚನಗಳಲ್ಲಿ ನೂರಾರು ಶರಣರ ಬದುಕಿನ ಅನುಭವದ ಸಾರವಿದೆ. ಅಂಧಶ್ರದ್ದೆ-ಮೌಢ್ಯದ ವಿರುದ್ಧದ ಆಕ್ರೋಶವಿದೆ, ಜ್ಞಾನದ ಬೆಳಕಿದೆ. ಶರಣರ ವಚನಗಳು ಹಾಳೆಗಳಿಗೆ ಸೀಮಿತವಾಗಬಾರದು, (2ನೇ ಪುಟಕ್ಕೆ)

## ಬಿಜೆಪಿಯವು ಜಾತಿ ಆಧಾರದ ಯೋಜನೆಗಳಲ್ಲ

### ಬಿಜೆಪಿ ಪ್ರಮುಖರ ಸಭೆಯಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್

ದಾವಣಗೆರೆ, ಮಾ.7- ಕಾಂಗ್ರೆಸ್ ಸರ್ಕಾರದಂತೆ ಬಿಜೆಪಿಯ ಮೋದಿ ಸರ್ಕಾರ ಜಾತಿ ಆಧಾರದ ಮೇಲೆ ಯೋಜನೆ ನೀಡಿಲ್ಲ. ಎಲ್ಲಾ ಜನರಿಗೆ ಎಲ್ಲ ಮೂಲಭೂತ ಸೌಕರ್ಯಗಳನ್ನು ನೀಡಿದೆ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದರು.

ನಗರದ ದಾವಣಗೆರೆ-ಹರಿಹರ ಸಹಕಾರ ಭವನದಲ್ಲಿ ಗುರುವಾರ ನಡೆದ ಲೋಕಸಭಾ ಚುನಾವಣೆ ಸಿದ್ಧತೆಗಾಗಿ ಬಿಜೆಪಿಯ ಧಾರವಾಡ ಕ್ಲಸ್ಟರ್‌ನ ಪ್ರಮುಖರ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರದಿಂದ ರಾಜ್ಯದಲ್ಲಿ ಅನೇಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಗ್ಯಾರಂಟಿಯಿಂದ ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳು ಬಂದ್ ಆಗಿವೆ ಎಂದವರು ಟೀಕಿಸಿದರು.

ದೇಶದಲ್ಲಿ ಕಾಂಗ್ರೆಸ್ ಸರ್ಕಾರದ 10 ವರ್ಷ ಸಾಧನೆ ಹಾಗೂ ಬಿಜೆಪಿ ಸರ್ಕಾರದ 10 ವರ್ಷದ ಸಾಧನೆ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ಬಹಿರಂಗ ಚರ್ಚೆಗೆ ಬರಲಿ ಎಂದು ಪ್ರಮೋದ್ ಸವಾಲು ಹಾಕಿದರು.

ದೇಶದಲ್ಲಿ ಮನಮೋಹನ್ ಸಿಂಗ್ ಅವರ ಸರ್ಕಾರದ ಆಡಳಿತದಲ್ಲಿ 2ಜಿ ಹಗರಣ, ಮೈನಿಂಗ್ ಹಗರಣ ಸೇರಿದಂತೆ, ಅನೇಕ ಹಗರಣಗಳು ನಡೆದಿದ್ದು, ಅವರ ಅವಧಿಯಲ್ಲಿ ಜಾರಿಯಾದ ಒಂದು ಯೋಜನೆಯೂ ಕೂಡ ಜನರಿಗೆ ನೆನಪಿಲ್ಲ. ಆದರೆ ಅವರು ಮಾಡಿದ ಹಗರಣಗಳು ಮಾತ್ರ ನೆನಪಿವೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಕರ್ನಾಟಕ ರಾಜ್ಯದ ಪರ ಕೆಲಸ ಮಾಡದೆ ಗಾಂಧಿ ಪರಿವಾರದ ಪರ ಕೆಲಸ ಮಾಡುತ್ತಿದ್ದು, ಕಾಂಗ್ರೆಸ್ ಪಕ್ಷ ರಾಜ್ಯವನ್ನು ಎಟಿಎಂ ಮಾಡಿಕೊಂಡಿದೆ. ಇಲ್ಲಿ ಲೂಟಿ ಮಾಡೋದೇ ಅವರಿಗೆ ಕೆಲಸವಾಗಿದೆ ಎಂದು ಆರೋಪಿಸಿದರು.

ಸಭೆಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ, ದಾವಣಗೆರೆ ಲೋಕಸಭಾ ಚುನಾವಣೆಯ ಉಸ್ತುವಾರಿ ಭೈರತಿ ಬಸವರಾಜ್, ಶಾಸಕರಾದ ಮಹೇಶ್ ತೆಂಗಿನಕಾಯಿ, ಚಂದ್ರು ಲಮಾಣಿ, ಬಿ.ಪಿ.ಹರೀಶ್, ಚನ್ನಬಸಪ್ಪ, ಮಾಜಿ ಶಾಸಕ ರವೀಂದ್ರ ನಾಥ್, ಮಾಡಾಳ್ ವಿರೂಪಾಕ್ಷಪ್ಪ, ಕಳಕಪ್ಪ ಬಂಡಿ, ಪ್ರೊ. ಲಿಂಗಣ್ಣ, ತಿಪ್ಪಾರೆಡ್ಡಿ, ಅರುಣ್ ಕುಮಾರ್ ಪೂಜಾರಿ, ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಶಿವಯೋಗಿಸ್ವಾಮಿ, ಬಿಜೆಪಿ ಧಾರವಾಡ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಿಗೆ, ಚಿತ್ರದುರ್ಗದ (2ನೇ ಪುಟಕ್ಕೆ)



## ಎಸ್.ಎಸ್. ಕೇರ್ ಟ್ರಸ್ಟ್ ದೇಶಕ್ಕೇ ಮಾದರಿ

### ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್

ದಾವಣಗೆರೆ, ಮಾ.7- ಎಸ್.ಎಸ್. ಕೇರ್ ಟ್ರಸ್ಟ್‌ನ ಯೋಚನೆ, ಯೋಜನೆ ಹಾಗೂ ಅನುಷ್ಠಾನ ಕಾರ್ಯಗಳು ದೇಶಕ್ಕೆ ಮಾದರಿಯಾಗಬಲ್ಲವು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್ ಹೇಳಿದರು.

ನಗರದ ಬಿಐಇಟಿ ಕಾಲೇಜು ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ 'ಸಂಸಾಧನಾ' ಎಸ್.ಎಸ್. ಕೇರ್ ಟ್ರಸ್ಟ್ 5ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಎಸ್.ಎಸ್. ಕೇರ್ ಟ್ರಸ್ಟ್‌ನ ಜಾಲತಾಣ ಉದ್ಘಾಟಿಸಿ ಅವರು ಮಾತನಾಡಿದರು.

ಅವಕಾಶ ದೊರೆತರೆ ಎಷ್ಟು ಸೇವಾ ಕೆಲಸಗಳನ್ನು ಮಾಡಬಹುದು ಎಂಬುದನ್ನು ಎಸ್.ಎಸ್. ಸೇವಾ ಟ್ರಸ್ಟ್ ಕಳೆದ ಐದು ವರ್ಷಗಳಲ್ಲಿ ಮಾಡಿರುವ ಸಾಧನೆಯಿಂದಲೇ ತಿಳಿಯಬಹುದಾಗಿದೆ ಎಂದು ಹೇಳಿದರು.

ಶಿಕ್ಷಣ ಹಾಗೂ ಆರೋಗ್ಯ ಮೂಲಭೂತ ಹಕ್ಕುಗಳ ಜೊತೆ ಮಾನವೀಯ ಹಕ್ಕುಗಳೂ ಸಹ ಆಗಿವೆ. ದಾವಣಗೆರೆಯಲ್ಲಿ ಬಾಪೂಜಿ ಸಂಸ್ಥೆ ಇವೆರಡನ್ನೂ ಜನತೆಗೆ ನೀಡುತ್ತಿದೆ. (2ನೇ ಪುಟಕ್ಕೆ)



### ಭ್ರೂಣ ಹತ್ಯೆ ಕುರಿತ ಜಾಗೃತಿ ಮೂಡಿಸಿ: ತರಳಬಾಳು ಶ್ರೀ

ಭ್ರೂಣಹತ್ಯೆ ಕುರಿತು ಜಾಗೃತಿ ಮೂಡಿಸುವಲ್ಲಿ ಎಸ್.ಎಸ್. ಕೇರ್ ಟ್ರಸ್ಟ್ ಗಮನ ಹರಿಸಲಿ ಎಂದು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಆಶಿಸಿದರು.

ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ವೈದ್ಯಕೀಯ ವಿಜ್ಞಾನ ಮುಂದುವರೆದಂತೆ ಹೆಣ್ಣು ಭ್ರೂಣ ಹತ್ಯೆಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಈ ಬಗ್ಗೆ ಜಾಗೃತರಾಗಬೇಕಿದೆ ಎಂದರು. ಜಗತ್ತಿನಲ್ಲಿ ಚೀನಾ ಹೊರತುಪಡಿಸಿದರೆ ಭಾರತದಲ್ಲೇ ಹೆಚ್ಚು ಭ್ರೂಣಹತ್ಯೆಗಳು (2ನೇ ಪುಟಕ್ಕೆ)

### ಜಿಲ್ಲಾದ್ಯಂತ ವಿಸ್ತರಣೆ ಗುರಿ

ಎಸ್.ಎಸ್. ಕೇರ್ ಟ್ರಸ್ಟ್ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ವಿಸ್ತರಿಸುವ ಉದ್ದೇಶ ಹೊಂದಲಾಗಿದೆ ಎಂದು ಟ್ರಸ್ಟ್‌ನ ಆಜೀವ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ನಮ್ಮ ಸಮುದಾಯವನ್ನು ಆರೋಗ್ಯವಂತರನ್ನಾಗಿ ಮಾಡುವ ಉದ್ದೇಶದಿಂದ 'ನಮ್ಮ ನಡೆ ಆರೋಗ್ಯದ ಕಡೆ' ಎಂಬ ಘೋಷ ವಾಕ್ಯದೊಂದಿಗೆ 2019ರಲ್ಲಿ ಟ್ರಸ್ಟ್ ಆರಂಭಗೊಂಡು, ಎಲ್ಲರ (2ನೇ ಪುಟಕ್ಕೆ)

## ತಾಯಿ ಎದೆ ಹಾಲಿಗಿಂತ ಮಿಗಿಲಾದ ಪೌಷ್ಠಿಕ ಆಹಾರ ಮತ್ತೊಂದಿಲ್ಲ



ದಾವಣಗೆರೆ, ಮಾ.7- ತಾಯಿ ಎದೆ ಹಾಲಿಗಿಂತ ಮಿಗಿಲಾದ ಪೌಷ್ಠಿಕ ಆಹಾರ ಮತ್ತೊಂದಿಲ್ಲ ಎಂದು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಇಂದು ಎದೆ ಹಾಲಿನ ಭಂಡಾರ ಸೇರಿದಂತೆ, ನವೀಕೃತ ಶಸ್ತ್ರ ಚಿಕಿತ್ಸಾ ಕೇಂದ್ರ ಮತ್ತು ವಿಸ್ತರಿತ ನವಜಾತ ಶಿಶು ಆರೈಕೆ ಕೇಂದ್ರದ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ನಮಗೆ ಬ್ಲಡ್ ಬ್ಯಾಂಕ್ ಗೊತ್ತಿತ್ತು, ಆದರೆ ಮದರ್ ಮಿಲ್ಕ್ ಬ್ಯಾಂಕ್ ಗೊತ್ತಿರಲಿಲ್ಲ. ನಮ್ಮ ತಾಯಿ ಎದೆ ಹಾಲನ್ನು ಬಹಳ ದಿನದವರೆಗೆ ಒತ್ತಾಯ ಮಾಡಿ ಕುಡಿಸಿದ ಕಾರಣವೇ ನಮ್ಮ ಆರೋಗ್ಯ ಹೀಗೆ ಉತ್ತಮವಾಗಿರಲು ಸಾಧ್ಯವಾಗಿದೆ. ಹಾಗಾಗಿ ತಾಯಿ ಎದೆ ಹಾಲಿಗಿಂತ ಬೇರೆ ಪೌಷ್ಠಿಕ ಆಹಾರ ಇಲ್ಲ ಎಂದರು.

ಮಕ್ಕಳ ತಜ್ಞರಾಗಿ ಮಕ್ಕಳ ಸೇವೆ ಮಾಡಿ, ಮಕ್ಕಳಂತೆ ಆಗಿದ್ದ ಡಾ. ನಿರ್ಮಲ ಕೇಸರಿ ಈಗ ಇದ್ದಿದ್ದರೆ ತುಂಬಾ ಖುಷಿ ಪಡುತ್ತಿದ್ದರು. ಈ ಎದೆ ಹಾಲು ಕೇಂದ್ರವನ್ನು ಸ್ಥಾಪಿಸುವ ಮೂಲಕ ಮತ್ತು ಆಧುನಿಕ ಆಪರೇಷನ್ ಥಿಯೇಟರ್ ಮತ್ತು ಆರೈಕೆ ಕೇಂದ್ರಗಳನ್ನು ವಿಶೇಷವಾಗಿ ಅಭಿವೃದ್ಧಿಪಡಿಸುವ ಮೂಲಕ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮತ್ತು ಆಸ್ಪತ್ರೆ ವೈದ್ಯರುಗಳು ಡಾ.ನಿರ್ಮಲಾ ಕೇಸರಿಯವರ ಆಶೋತ್ತರಗಳನ್ನು ಈಡೇರಿಸಿದ್ದಾರೆ ಎಂದು ಶ್ರೀಗಳು ಶ್ಲಾಘಿಸಿದರು.

ಆಸ್ಪತ್ರೆ ತುಂಬಾ ಅಭಿವೃದ್ಧಿಯಾಗಿದೆ. ಆರೋಗ್ಯ ರಕ್ಷಣೆಗಿಂತ ಪುಣ್ಯದ ಕಾರ್ಯ ಮತ್ತೊಂದು ಇಲ್ಲ. ಮಂದಿರ, ಮಸೀದಿ ಮತ್ತು ಚರ್ಚ್‌ಗಳಿಗೆ ಹೋಗುವುದಕ್ಕಿಂತ ಆಸ್ಪತ್ರೆಗಳಿಗೆ ಪ್ರತಿ ವಾರ ಬರುವುದೇ ಆರೋಗ್ಯಕ್ಕೆ ಉತ್ತಮ ಎಂದು ಶ್ರೀಗಳು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಚೇರ್ಮನ್, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ (4ನೇ ಪುಟಕ್ಕೆ)

## 5, 8, 9, 11ನೇ ತರಗತಿ ಪರೀಕ್ಷೆಗೆ ಅವಕಾಶ

ಬೆಂಗಳೂರು, ಫೆ.7 - ರಾಜ್ಯಪಠ್ಯಕ್ರಮವಿರುವ ಶಾಲೆಗಳ ಮಕ್ಕಳಿಗೆ ರಾಜ್ಯ ಮಟ್ಟದ ಬೋರ್ಡ್ ಪರೀಕ್ಷೆ ನಡೆಸುವ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿದ್ದ ಸುತ್ತೋಲೆಯನ್ನು ರದ್ದುಪಡಿಸಿದ್ದ ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶಕ್ಕೆ ದ್ವಿ ಸದಸ್ಯ ಪೀಠ ತಡೆ ನೀಡಿದೆ. ಅಲ್ಲದೆ, ಸೋಮವಾರದಿಂದ ನಡೆಯಬೇಕಿದ್ದ ಬೋರ್ಡ್ ಮಟ್ಟದ ಪರೀಕ್ಷೆಗಳಿಗೆ ಅನುಮತಿ ನೀಡಿದೆ.

5, 8, 9 ಮತ್ತು 11ನೇ ತರಗತಿಗಳ ವಿದ್ಯಾರ್ಥಿಗಳಿಗೆ ಶಾಲಾ ಮಟ್ಟದ ಮೌಲ್ಯಮಾಪನದ ಬದಲಾಗಿ ರಾಜ್ಯ ಮಟ್ಟದ ಮಂಡಳಿ ಪರೀಕ್ಷೆ ನಡೆಸಲು ತೀರ್ಮಾನಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಸುತ್ತೋಲೆಯನ್ನು ರದ್ದುಪಡಿಸಿದ್ದ ಏಕ ಸದಸ್ಯ ಪೀಠದ ಆದೇಶ ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಮೂರ್ತಿ ರಾಜೇಶ್ ರೈ ಅವರಿದ್ದ ವಿಭಾಗೀಯ ಪೀಠ ಈ (4ನೇ ಪುಟಕ್ಕೆ)

## ಕೇಂದ್ರದ ಯೋಜನೆಗಳಿಂದ ದೇಶ ಸುಭಿಕ್ಷ



### ಭಾರತ್ ರೈಸ್ ವಿತರಣೆಗೆ ಚಾಲನೆ ನೀಡಿದ ಸಂಸದ ಜಿ.ಎಂ. ಸಿದ್ದೇಶ್ವರ

ದಾವಣಗೆರೆ, ಮಾ.7- ಕೇಂದ್ರದ ಹಲವಾರು ಯೋಜನೆಗಳಿಂದ ದೇಶ ಇಂದು ಸುಭಿಕ್ಷವಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ರಾಮ್ ಅಂಡ್ ಕೋ ವೃತ್ತದಲ್ಲಿ ಗುರುವಾರ ಕೇಂದ್ರ ಸರ್ಕಾರದ ಭಾರತ್ ರೈಸ್ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಜನಸಾಮಾನ್ಯರಿಗೆ ಸೋವಿ ದರದಲ್ಲಿ 29 ರೂ.ಗೆ ಒಂದು ಕೆಜಿ ಗುಣಮಟ್ಟದ ಅಕ್ಕಿ ಮಾರಾಟ ಮಾಡುವ ಯೋಜನೆ ಜಾರಿಗೆ ತಂದಿದೆ. ಇದಕ್ಕೆ ಚುನಾವಣಾ ನೀತಿ ಸಂಹಿತೆ ಅಡ್ಡಿ ಬರುವುದಿಲ್ಲ ಎಂದು ಸಂಸದರು ಸ್ಪಷ್ಟಪಡಿಸಿದರು.

ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ 'ಭಾರತ್ ರೈಸ್' ಕೊಡುತ್ತಿರುವುದೇ ಪ್ರಧಾನಿ ನರೇಂದ್ರ ಮೋದಿ ಅವರ ಗ್ಯಾರಂಟಿಯಾಗಿದೆ ಎಂದ ಅವರು, ಎಲ್ಲೆಲ್ಲಿ ಬೇಡಿಕೆ ಬರುತ್ತದಯೋ ಅಲ್ಲೆಲ್ಲಾ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು. ಗ್ರಾಮೀಣ ಪ್ರದೇಶದಲ್ಲೂ ನಾಲ್ಕು ವಾಹನಗಳ ಮೂಲಕ ಅಕ್ಕಿ ಮಾರಾಟ ಮಾಡಲಾಗುವುದು ಎಂದರು.

ದಾವಣಗೆರೆಯ ಕೆಲ ವಾರ್ಡುಗಳಲ್ಲಿ 24 ಗಂಟೆ ನೀರು ಪೂರೈಕೆಯಾಗುತ್ತಿದ್ದು, ಮುಂದಿನ 6 ತಿಂಗಳಲ್ಲಿ ಎಲ್ಲಾ ವಾರ್ಡ್‌ಗಳಿಗೂ ನಿರಂತರ ನೀರು ಸರಬರಾಜು ಮಾಡಲಾಗುವುದು. ಪಾಲಿಕೆ ವ್ಯಾಪ್ತಿ ಜಲಸಿರಿ ಯೋಜನೆಯಡಿ, ಗ್ರಾಮೀಣ ಪ್ರದೇಶದಲ್ಲಿ ಜಲ (2ನೇ ಪುಟಕ್ಕೆ)

## ರಾಜ್ಯ ಪ್ರಶಸ್ತಿಗೆ ದಾವಣಗೆರೆ ಮಹಾನಗರ ಪಾಲಿಕೆ ಆಯ್ಕೆ



ದಾವಣಗೆರೆ, ಮಾ.7- ಡೇ ನಲ್ಮ್ ಅಭಿಯಾನದ ಉಪ ಘಟಕವಾರು ಎಂ.ಐ.ಎಸ್.ನ ದತ್ತಾಂಶದಂತೆ ಸಾಧನೆ ಮಾಡಿದ ಕರ್ನಾಟಕದ ಆಯ್ದ ನಗರ ಸ್ಥಳೀಯ ಸಂಸ್ಥೆಗಳಿಗೆ ಕೊಡ ಮಾಡುವ ರಾಜ್ಯ ಮಟ್ಟದ ಪ್ರಶಸ್ತಿಗೆ ದಾವಣಗೆರೆ ಮಹಾನಗರ ಪಾಲಿಕೆ ಭಾಜನವಾಗಿದೆ.

ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿಯಲ್ಲಿ ಪ್ರತಿ ವರ್ಷ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ನೀಡುವ ಪ್ರಶಸ್ತಿಗೆ ದಾವಣಗೆರೆ ಮಹಾನಗರ ಪಾಲಿಕೆಯೂ ಸೇರಿದಂತೆ, ರಾಜ್ಯದ ಆಯ್ದ ಪುರಸಭೆ, ಪಟ್ಟಣ ಪಂಚಾಯ್ತಿ, ನಗರಸಭೆ, ಮಹಾನಗರ ಪಾಲಿಕೆಗಳು ಆಯ್ಕೆಯಾಗಿವೆ.

ಒಟ್ಟು ಮೂರು ವಿಭಾಗಗಳಲ್ಲಿ ಮಾಡಿದ ಸಾಧನೆಗಾಗಿ ದಾವಣಗೆರೆ ಮಹಾನಗರ ಪಾಲಿಕೆಯನ್ನು ರಾಜ್ಯ ಮಟ್ಟದ ಪ್ರಶಸ್ತಿಗಳಿಗೆ ಆಯ್ಕೆ ಮಾಡಿದ್ದು, ನಾಳೆ ದಿನಾಂಕ 8ರ ಶುಕ್ರವಾರ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಏರ್ಪಾಡಾಗಿರುವ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ. (4ನೇ ಪುಟಕ್ಕೆ)

## ಸುಲ್ತಾನಿಪುರದ ಎಸ್. ನಂಜಪ್ಪ ನಿಧನ



ದಾವಣಗೆರೆ ಆಂಜನೇಯ ಬಡಾವಣೆ, 4ನೇ ಕ್ರಾಸ್ ವಾಸಿ ನಿವೃತ್ತ ಉಪನ್ಯಾಸಕರಾದ
**ಶ್ರೀ ಎಸ್. ನಂಜಪ್ಪನವರು**
ದಿನಾಂಕ 7.3.2024ರ ಗುರುವಾರ ಮಧ್ಯಾಹ್ನ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 101 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 8.3.2024ರ ಶುಕ್ರವಾರ ಬೆಳಿಗ್ಗೆ 11.30ರವರೆಗೆ ನಗರದ ಆಂಜನೇಯ ಬಡಾವಣೆಯ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು.
ನಂತರ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಸುಲ್ತಾನಿಪುರದ ಮೃತರ ಜಮೀನಿನಲ್ಲಿ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಪುತ್ರ ಶಿವಶಂಕರ್ ಮತ್ತು ಸಹೋದರಿಯರು. ಮೊ : 70220 88156

## ಹೃತ್ಪೂರ್ವಕ ಅಭಿನಂದನೆಗಳು



ದಾವಣಗೆರೆ ಸ್ಮಾರ್ಟ್ ಸಿಟಿ ಲಿ., ಮುಖ್ಯ ಇಂಜಿನಿಯರ್ ಆಗಿ ಅಧಿಕಾರ ಕಾರ್ಯಭಾರವನ್ನು ವಹಿಸಿಕೊಂಡಿರುವ ಮಾನ್ಯ
**ಶ್ರೀ ಹೆಚ್. ಟಾಟಾಶಿವನ್**
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

- ಶ್ರೀ ಬಿ.ಪುಟ್ಟಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರರು
- ಶ್ರೀ ಶ್ರೀಮತಿ ಕರುಣ, ಸಹಾಯಕ ಅಭಿಯಂತರರು
- ಶ್ರೀ ಎನ್.ಎಂ. ನಾಗರಾಜ್, ಕಿರಿಯ ಅಭಿಯಂತರರು
- ಶ್ರೀ ಮಂಜುನಾಥ ತಡಕನಹಳ್ಳಿ, ಶೀಘ್ರ ಲಿಪಿಗಾರರು
- ಶ್ರೀ ರಾಘವೇಂದ್ರ ಜಿ. ಸಹಾಯಕ ಅಭಿಯಂತರರು
- ಶ್ರೀ ಹೆಚ್. ವೆಂಕಟೇಶ್, ಸಹಾಯಕ ಅಭಿಯಂತರರು
- ಶ್ರೀ ರಾಜೀವ್ ಜಿ.ಹೆಚ್. ಕಿರಿಯ ಅಭಿಯಂತರರು
- ಶ್ರೀ ಪವನ್ ಜೆ., ಕಿರಿಯ ಅಭಿಯಂತರರು

ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿ ವರ್ಗದವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಗೂ ಉಪ ವಿಭಾಗ, ದಾವಣಗೆರೆ.

## ವಿದೇಶ ಪ್ರವಾಸ ಶುಭ ಹಾರೈಕೆಗಳು



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಡ್ಡಿನಳ್ಳೇರ
ಶ್ರೀ ಎನ್. ಚಂದ್ರಪ್ಪ ಮತ್ತು ಶ್ರೀಮತಿ ಸುಮಿತ್ರಮ್ಮನವರ ಮೊಮ್ಮಗ
**ನಂದೀಶ್ ಜಿ.ಕೆ.**
BE M.Tech
ಇವರು ದಿನಾಂಕ 08.03.2024ರ ಶುಕ್ರವಾರ ಬೆಂಗಳೂರಿನ HARNESS ಕಂಪನಿ ವತಿಯಿಂದ ಅಮೇರಿಕಾ ದೇಶಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಇವರ ವಿದೇಶ ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುವವರು.

ಶ್ರೀಮತಿ ಸುಷ್ಮಾ ಮತ್ತು ಶ್ರೀ ಅಜಯ್ ಎನ್.ಸಿ. ಶಕ್ತಿನಗರ, ದಾವಣಗೆರೆ.
ಪುಣ್ಯ, ಹರ್ಷಿತ್
ಶ್ರೀಮತಿ ಕವಿತಾ ಮತ್ತು ಶ್ರೀ ಸಿದ್ದೇಶ್ ಎನ್.ಸಿ. ನಾಗರಕಟ್ಟೆ, ದಾವಣಗೆರೆ
ಶ್ರೇಯಸ್, ಶ್ರೇಷ್ಠ
ಶ್ರೀಮತಿ ಗೀತಾ ಮತ್ತು ಶ್ರೀ ಕಾಂತರಾಜ್, ಬಿಡದಿ, ರಾಮನಗರ ತಾ.
ವಿದ್ಯಾ ಜಿ.ಕೆ. ಹಾಗೂ ಬಂಧು-ಮಿತ್ರರು.

# ಕಾಂಗ್ರೆಸ್ ಅಭ್ಯರ್ಥಿ ಆಯ್ಕೆಗಾಗಿ ಮತ್ತೊಂದು ಸುತ್ತಿನ ಚರ್ಚೆ

ಬೆಂಗಳೂರು, ಮಾ. 7- ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಇನ್ನೆರಡು-ಮೂರು ದಿನಗಳಲ್ಲಿ ಪ್ರಕಟಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಸಂಬಂಧ ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಹಲವು ಸುತ್ತಿನ ಚರ್ಚೆಗಳು ನಡೆದಿವೆ ಎಂದವರು ತಿಳಿಸಿದರು.

ಚುನಾವಣಾ ಪೂರ್ವ ಸಮೀಕ್ಷೆ, ಅಭ್ಯರ್ಥಿಗಳ ಆಯ್ಕೆ ಸಂಬಂಧ ನೇಮಕಗೊಂಡಿದ್ದ ಉಸ್ತುವಾರಿ ಸಚಿವರ ವರದಿಯೂ ಸೇರಿದಂತೆ ಹಲವು ಮಾಹಿತಿಗಳನ್ನು ಆಧರಿಸಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ವರಿಷ್ಠರಿಗೆ ಶಿಫಾರಸು ಮಾಡಲಾಗಿದೆ ಎಂದು ಹೇಳಿದರು.

ವರಿಷ್ಠರ ಸೂಚನೆಯಂತೆ ಕೆಲವು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ನಗರದಲ್ಲೇ ಶನಿವಾರ ಮತ್ತೊಂದು ಸುತ್ತಿನ ಚರ್ಚೆ ನಡೆಯಲಿದೆ.

ಪಕ್ಷದ ಕೇಂದ್ರ ಚುನಾವಣಾ ಸಮಿತಿ ಸದಸ್ಯರು ನಗರಕ್ಕೆ ಆಗಮಿಸಲಿದ್ದು, ಅವರ ಸಮ್ಮುಖದಲ್ಲೇ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲಲೇಬೇಕೆಂಬ ಗುರಿಯೊಂದಿಗೆ ಕಾಂಗ್ರೆಸ್ ಕಸರತ್ತು ನಡೆಸಿದೆ.

ಸಂಭವನೀಯ ಅಭ್ಯರ್ಥಿಗಳಿಗೆ ಕೆಲವು ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ಆರಂಭಿಸುವಂತೆಯೂ ಹಸಿರು ನಿಶಾನೆ ತೋರಿದ್ದು, ಸಿದ್ದರಾಮಯ್ಯ ಈಗಾಗಲೇ ಸಿದ್ಧತೆ ನಡೆಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಬಂದಿರುವ ಸರಾಸರಿ ಮತವನ್ನು ಈ ಚುನಾವಣೆಯಲ್ಲಿ ಶೇಕಡಾ 4ರಿಂದ 5ರಷ್ಟು ಹೆಚ್ಚಳ ಮಾಡಿಕೊಂಡರೆ ತಮ್ಮ ನಿಗದಿತ ಗುರಿಯನ್ನು ಮುಟ್ಟಬಹುದೆಂಬ ಆಶಾಭಾವನೆ ಇದೆ.

**ಇನ್ನೆರಡು-ಮೂರು ದಿನದಲ್ಲಿ ಅಭ್ಯರ್ಥಿಗಳ ಪಟ್ಟಿ ಪ್ರಕಟ.**
**- ಸಿದ್ದರಾಮಯ್ಯ**

ಇದಕ್ಕಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ತಂತ್ರಗಾರಿಕೆಯನ್ನು ತೆರೆಮರೆಯಲ್ಲಿ ಮಾಡುತ್ತಿದ್ದಾರೆ.

ಬಿಜೆಪಿ-ಜೆಡಿಎಸ್‌ನಿಂದ ಈಗಾಗಲೇ ಕೆಲವು ಮುಖಂಡರನ್ನು ಸೆಳೆದುಕೊಂಡಿರುವ ಕಾಂಗ್ರೆಸ್, ಶಿವರಾತ್ರಿ ಹಬ್ಬದ ನಂತರ ಮತ್ತಷ್ಟು ಮುಖಂಡರು ಮತ್ತು ಕಾರ್ಯಕರ್ತರನ್ನು ಸೆಳೆಯಲು ವೇದಿಕೆ ಸಿದ್ಧವಾಗಿದೆ.

ಇವರಲ್ಲಿ ಬಿಜೆಪಿಯ ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ, ವಿಧಾನ ಪರಿಷತ್ ಸದಸ್ಯೆ ತೇಜಸ್ವಿನಿ ಗೌಡ, ಅದೇ ಪಕ್ಷಕ್ಕೆ ಸೇರಿದ ಮಾಜಿ ಸಚಿವ ಡಾ.ಸುಧಾಕರ್, ಜೆಡಿಎಸ್‌ನ ಮಂಡ್ಯದ ಎಂ.ಶ್ರೀನಿವಾಸ್, ಅಪ್ಪಾಜಿಗೌಡ ಪ್ರಮುಖರಾಗಿದ್ದಾರೆ.

ಇನ್ನೊಂದೆಡೆ ಬಿಜೆಪಿ, ಜೆಡಿಎಸ್ ಜೊತೆಗೂಡಿ ಕರ್ನಾಟಕದ ಎಲ್ಲಾ 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸಬೇಕೆಂದು ಪಣ ತೊಟ್ಟಿವೆ.

ಈ ಬಾರಿ ವರಿಷ್ಠರೇ ರಾಜ್ಯದ ಸಂಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡು ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಿದ್ದಾರೆ.

ರಾಜ್ಯದ ಪ್ರಮುಖ ನಾಯಕರನ್ನು ದೆಹಲಿಗೆ ಕರೆಸಿಕೊಂಡಿರುವ ವರಿಷ್ಠರು ಕಳೆದ ಎರಡು ದಿನಗಳಿಂದ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಚರ್ಚೆ ಮುಂದುವರೆಸಿದ್ದಾರೆ.

ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟಗೊಳ್ಳುವ ಮುನ್ನವೇ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡುವ ಸಾಧ್ಯತೆ ಇದೆ.

# ಕೊಡದಗುಡ್ಡದಲ್ಲಿ 14 ರಂದು ಅಡ್ಡಪಲ್ಲಕ್ಕಿ ಮಹೋತ್ಸವ, ಧರ್ಮ ಸಭೆ



ಜಗಳೂರು, ಮಾ. 7 - ತಾಲ್ಲೂಕಿನ ಪ್ರಸಿದ್ಧ ಕೊಡದಗುಡ್ಡ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಇದೇ ದಿನಾಂಕ 14ರಂದು ನೂತನವಾಗಿ ನಿರ್ಮಿಸಿರುವ ವಸತಿ ಗೃಹಗಳ ಉದ್ಘಾಟನೆ, ಕರಿಗಲ್ಲು ಸ್ಥಾಪನೆ, ಕಲ್ಯಾಣ ಮಂಟಪಕ್ಕೆ ಶಂಕು ಸ್ಥಾಪನೆ ಹಾಗೂ ಅಡ್ಡ ಪಲ್ಲಕ್ಕಿ ಮಹೋತ್ಸವ ಮತ್ತು ಧರ್ಮಸಭೆ ನಡೆಯಲಿದೆ ಎಂದು ತಪೋ ಕ್ಷೇತ್ರ ಕಣ್ವಕುಪ್ಪೆ ಗವಿಮಠದ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ವೀರಭದ್ರೇಶ್ವರ ದೇವಸ್ಥಾನ ಸಭಾಂಗಣದಲ್ಲಿ ಸಮಾರಂಭದ ಪೂರ್ವಭಾವಿ ಸಭೆಯಲ್ಲಿ ಶ್ರೀಗಳು ಮಾತನಾಡಿದರು.

ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕಾ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಮತ್ತು ಕೇದಾರ ರಾಜ ಗುರುವರ್ಯ ಭೀಮಾ ಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಅಂದು ಬೆಳಗ್ಗೆ ಒಂಬತ್ತು ಗಂಟೆಗೆ ದೇವಿಕೆರೆ ಗ್ರಾಮದಲ್ಲಿ ಮಹಾದ್ವಾರ ಉದ್ಘಾಟನೆ ನೆರವೇರಿಸುವರು.

ಬೆಳಿಗ್ಗೆ 9.30ಕ್ಕೆ ಬಸವಾಪುರದಲ್ಲಿ ಅಡ್ಡ ಪಲ್ಲಕ್ಕಿ ಮೆರವಣಿಗೆ ಮೂಲಕ ಕೊಡದಗುಡ್ಡ ಗ್ರಾಮಕ್ಕೆ ಆಗಮಿಸಿ ಕರಿಗಲ್ಲಿಗೆ ಅಕ್ಷತೆ ,ಯಾತ್ರಿ ನಿವಾಸ್ ಉದ್ಘಾಟನೆ ಹಾಗೂ ಕಲ್ಯಾಣ ಮಂಟಪಕ್ಕೆ ಶಂಕು ಸ್ಥಾಪನೆ ನೆರವೇರುವುದು. ನಂತರ ಇತರೆ ವೇದಿಕೆ ಕಾರ್ಯಕ್ರಮಗಳು ಹಾಗೂ ಶ್ರೀಗಳಿಂದ ಆಶೀರ್ವಾದ ಸಂದೇಶ ಇರುತ್ತದೆ.

ಈ ಸಂದರ್ಭದಲ್ಲಿ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಿಎಸ್ ಮಲ್ಲಿಕಾರ್ಜುನ್ ,ಉಪಾಧ್ಯಕ್ಷ ಎಂ.ವಿ. ಚೆನ್ನಯ್ಯ, ಕಾರ್ಯದರ್ಶಿ ಗೌಡ್ರು ಡಿ.ಸಿ ರುದ್ರಸ್ವಾಮಿ. ಪದಾಧಿಕಾರಿಗಳಾದ ಎಂ.ಪಿ. ಶಿವಕುಮಾರ ಸ್ವಾಮಿ, ಕೆ.ಆರ್. ಚಂದ್ರಶೇಖರ್ ,ಕೆ.ವಿ. ವಿರೂಪಾಕ್ಷಪ್ಪ , ಟಿ. ಕಲ್ಲಪ್ಪ, ಡಿ.ಎಸ್. ಮಲ್ಲಿಕಾರ್ಜುನ, ವಿಎಸ್ಎಸ್ಎನ್ ಅಧ್ಯಕ್ಷ ರವಿಚಂದ್ರ ಬಸಾಪುರ ಮುಂತಾದವರು ಉಪಸ್ಥಿತರಿದ್ದರು.

# ಹೊನ್ನಾಳಿಯಲ್ಲಿ ಇಂದಿನಿಂದ 3 ದಿನ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ

ಹೊನ್ನಾಳಿ, ಮಾ. 7 - ಈಶ್ವರೀಯ ವಿಶ್ವವಿದ್ಯಾಲಯದಿಂದ ಹೊನ್ನಾಳಿ ಪಟ್ಟಣದ ನೀಲಕಂಠೇಶ್ವರ ದೇವಾಲಯದಲ್ಲಿ ನಾಳೆ ದಿನಾಂಕ 8ರ ಶುಕ್ರವಾರದಿಂದ ಇದೇ ದಿನಾಂಕ 10ರ ಭಾನುವಾರದವರೆಗೆ ಮೂರು ದಿನಗಳು ದ್ವಾದಶ ಜ್ಯೋತಿರ್ಲಿಂಗಗಳ ದಿವ್ಯ ದರ್ಶನ ಏರ್ಪಡಿಸಲಾಗಿದೆ ಎಂದು ವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಜ್ಯೋತಿ ತಿಳಿಸಿದರು.

ನಾಡಿದ್ದು ದಿನಾಂಕ 9ರ ಶನಿವಾರ ಸಂಜೆ 6ಕ್ಕೆ ಅಸತೋಮ ಸದ್ಗಮಯ ಅಧ್ಯಾತ್ಮಿಕ ನಾಟಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಮಾ. 10ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಶಿವರಾತ್ರಿ ಪ್ರಯುಕ್ತ ಮಹಿಳಾ ದಿನಾಚರಣೆ ನಡೆಯಲಿದ್ದು, ಹಿರೇಕಲ್ಮಠದ ಡಾ. ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಶಾಸಕ ಶಾಂತನಗೌಡರು ಸಮಾರಂಭ ಉದ್ಘಾಟಿಸಲಿದ್ದು ಅತಿಥಿಗಳಾಗಿ ರೇಣುಕಾಚಾರ್ಯ ಕೆಂಚಪ್ಪ, ಜ್ಯೋತಿ, ನಾಗೇಂದ್ರ, ಮತ್ತಿತರರು ಭಾಗವಹಿಸಲಿದ್ದಾರೆ. ಮೌಲ್ಯಯುಕ್ತ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಎಂಬ ವಿಷಯವಾಗಿ ಶಿರಸಿಯ ರಾಜಯೋಗಿನಿ ಬ್ರಹ್ಮಾಕುಮಾರಿ ವೀಣಾಜಿ ಅವರಿಂದ ಉಪನ್ಯಾಸ ನಡೆಯಲಿದೆ.

# ರಾಣೇಬೆನ್ನೂರಿನಲ್ಲಿ ಇಂದು ಶಿವರಾತ್ರಿ

ಈಶ್ವರೀಯ ವಿಶ್ವವಿದ್ಯಾಲಯದಿಂದ ಮಹಾಶಿವರಾತ್ರಿ ಹಾಗೂ ಮಹಿಳಾ ದಿನಾಚರಣೆ ಅಂಗವಾಗಿ ಕಾಕಿ ಸಭಾ ಭವನದಲ್ಲಿ ಧಾರ್ಮಿಕ ಸಭೆ ಏರ್ಪಡಿಸಲಾಗಿದೆ. ಶಾಸಕ ಪ್ರಕಾಶ್ ಕೋಳಿವಾಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ರುಕ್ಮಿಣಿ ಸಾವುಕಾರ ಅಧ್ಯಕ್ಷತೆ ವಹಿಸುವರು. ಹದಡಿಯ ಬ್ರಹ್ಮಾಕುಮಾರಿ ರೂಪ ಅವರು ಸಂಸ್ಥೆಯ ಪರಿಚಯ ಮಾಡುವರು.

ಮಾಜಿ ಶಾಸಕ ಅರುಣಕುಮಾರ, ವರ್ತಕರಾದ ಎಂ. ಎಸ್. ಅರಕೇರಿ, ಜಿ.ಜಿ. ಹೊಟ್ಟಿಗೌಡ್ರ, ಭಾರತಿ ಜಂಬಗಿ, ಮಂಗಳಗೌರಿ ಪೂಜಾರ, ಶ್ರೀನಿವಾಸ ಕಾಕಿ, ರೂಪಾ ಕಾಕಿ ಅತಿಥಿಗಳಾಗಿ ಭಾಗವಹಿಸುವರು.

35 ಕಾರುಗಳು ಹಾಗೂ ವಿವಿಧ ವಾದ್ಯ ತಂಡಗಳೊಂದಿಗೆ ಮೆರವಣಿಗೆ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಕಾಕಿ ಜನಸೇವಾ ಸಭಾ ಮಂದಿರಕ್ಕೆ ಬರಲಿದೆ. ನಂತರ ಧಾರ್ಮಿಕ ಸಭೆ, ಓಂ ನಮಃ ಶಿವಾಯ ಮಹಾಮಂತ್ರದ ಅರ್ಥ ಸ್ವರೂಪದ ಜಾಗರಣೆ ನಡೆಯಲಿದೆ ಎಂದು ಸಂಸ್ಥೆಯ ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಮಾಲತಿ ತಿಳಿಸಿದ್ದಾರೆ.


## ಶ್ರೀಮತಿ ನೀಲಮ್ಮ ನಿಧನ



ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ ವಾಸಿ


**ಮೆಳ್ಳೇಕಟ್ಟೆ ಶ್ರೀಮತಿ ನೀಲಮ್ಮ**

ಇವರು ದಿನಾಂಕ : 7.3.2024 ರಂದು ಗುರುವಾರ ಬೆಳಿಗ್ಗೆ 10.30ಕ್ಕೆ ನಿಧನರಾಗಿರುತ್ತಾರೆ. ಮೃತರು ಓರ್ವ ಪುತ್ರ ಇಬ್ಬರು ಪುತ್ರಿಯರು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ವಿವೇಕಾನಂದ ಬಡಾವಣೆಯ ಮನೆಯಲ್ಲಿ ಬೆಳಿಗ್ಗೆ 8.30ರ ವರೆಗೆ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ಮೃತರ ಅಂತ್ಯಕ್ರಿಯೆಯನ್ನು 8.3.2024ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಮೆಳ್ಳೇಕಟ್ಟೆ ಗ್ರಾಮದ ತಮ್ಮ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ, ಫೋ. : 91648 96094**

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

## ಗುರುಲಿಂಗ ಜಂಗಮರಾಧನೆ ಆಹ್ವಾನ ಪತ್ರಿಕೆ



ಜನನ : 13.03.1949
ನಿಧನ : 05.03.2024

ದಾವಣಗೆರೆ ತಾ॥ ನೇರ್ಲಿಗೆ ಗ್ರಾಮದ ವಾಸಿಗಳಾದ ಶ್ರೀ ಎನ್.ಎಂ. ಬಸವರಾಜಯ್ಯನವರು ಮಾಡುವ ವಿಜ್ಞಾಪನೆಗಳು.

ದಿನಾಂಕ 05.03.2024ನೇ ಮಂಗಳವಾರ ಸಂಜೆ 6.45ಕ್ಕೆ ನಮ್ಮ ತಮ್ಮನಾದ

**ಶರಣ ಎಂ.ಆರ್. ಮರುಳಸಿದ್ದಯ್ಯ**

(ನಿವೃತ್ತ ಬೆಸ್ಕಾಂ ನೌಕರರು)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಗುರುಲಿಂಗ ಜಂಗಮಾರಾಧನೆಯನ್ನು**

ದಿನಾಂಕ 09.03.2024ನೇ ಶನಿವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ #1101, 1ನೇ ಕ್ರಾಸ್, 2ನೇ ಮೇನ್, ತರಳಬಾಳು ಬಡಾವಣೆ ವಿದ್ಯಾನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

: ದುಃಖತಪ್ತರು :

ಮೃತರ ಧರ್ಮಪತ್ನಿ ಶ್ರೀಮತಿ ಲೋಹಿತಾಕ್ಷಿ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ನೇರ್ಲಿಗೆ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ : 94823 51380

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ


# ಎಸ್.ಎಸ್. ಕೇರ್ ಟ್ರಸ್ಟ್ ದೇಶಕ್ಕೆ ಮಾದರಿ

**(1ನೇ ಪುಟದಿಂದ)** ಒಂದು ಪಕ್ಷ ಇಲ್ಲಿ ಬಾಪೂಜಿ ಸಂಸ್ಥೆ ಇರದೇ ಇದ್ದಲ್ಲಿ ಶಿಕ್ಷಣ ಹಾಗೂ ಆರೋಗ್ಯಕ್ಕಾಗಿ ಬೇರೆ ಊರುಗಳಿಗೆ ಹೋಗಬೇಕಾಗುತ್ತಿತ್ತು ಎಂದರು.

ಮಕ್ಕಳು ದೇಶದ ಬಹು ದೊಡ್ಡ ಸಂಪತ್ತು. ಮಹಿಳೆ ಆರೋಗ್ಯವಾಗಿದ್ದರೆ, ಇಡೀ ಕುಟುಂಬವೇ ಆರೋಗ್ಯವಾಗಿರುತ್ತದೆ. ಮಕ್ಕಳು ಹಾಗೂ ಮಹಿಳೆಯರ ಆರೋಗ್ಯದ ಕಡೆ ಹೆಚ್ಚು ಒತ್ತು ನೀಡುತ್ತಿರುವ ಟ್ರಸ್ಟ್‌ನ ಸೇವೆ ಶ್ಲಾಘನೀಯ ಎಂದು ಶಿವರಾಜ್ ಪಾಟೀಲ್ ಹೇಳಿದರು.

ಕೆಲವು ಕಾರ್ಯಕ್ರಮಗಳಲ್ಲಿ ಕೆಲಸಗಳು ಕೇವಲ ಮಾತಿನಲ್ಲಿಯೇ ಇರುತ್ತವೆ. ಆದರೆ ಇಂದಿನ ಕಾರ್ಯಕ್ರಮದಲ್ಲಿ ಟ್ರಸ್ಟ್ ಮಾಡಿದ ಕೆಲಸಗಳೇ ಮಾತುಗಳಾಗಿವೆ. ಪ್ರಚಾರಕ್ಕಲ್ಲದೆ, ಪ್ರಯೋಜನಕ್ಕಾಗಿ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಶಾಮನೂರು ಶಿವಶಂಕರಪ್ಪ ಅವರ ಮುಂದಾಲೋಚನೆ, ಜನಪರ ಕಾಳಜಿ, ಕ್ರಿಯಾಶೀಲರಾಗಿರುವ ಮಲ್ಲಿಕಾರ್ಜುನ್ ಅವರ ಅನುಷ್ಠಾನ ಕಾರ್ಯಗಳು, ಡಾ. ಪ್ರಭಾ ಅವರ ಕಾರ್ಯಕ್ಷಮತೆಯ ಜೊತೆಗೆ ಸಿಬ್ಬಂದಿಗಳೂ ಕೈ ಜೋಡಿಸಿರುವುದರಿಂದ ಕಡಿಮೆ ಅವಧಿಯಲ್ಲಿ ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವಾಗಿದೆ. ಟ್ರಸ್ಟ್ ಇನ್ನೂ ಐದು ವರ್ಷದ ಕೂಸು. ಈಗಲೇ ಇಷ್ಟು ಸಾಧನೆ ಮಾಡಿದೆ ಎಂದರೆ, ಮುಂದಿನ ದಿನಗಳಲ್ಲಿ ಎಷ್ಟು ಸಾಧನೆ ಮಾಡಬಹೆಂದು ಊಹಿಸಿಕೊಳ್ಳಬೇಕು ಎಂದು ಹೇಳಿದರು.

ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರುಗಳಾದ ಕಿರುವಾಡಿ ಗಿರಿಜಮ್ಮ, ಅಥಣಿ ವೀರಣ್ಣ ಉಪಸ್ಥಿತರಿದ್ದರು.

ಎಸ್ಎಸ್ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ.ಪ್ರಸಾದ್ ಸ್ವಾಗತಿಸಿದರು. ಅಖಿಲ್ ಮತ್ತು ಉದಯ್ ಪ್ರಾರ್ಥಿಸಿದರು. ಇದೇ ವೇಳೆ ಟ್ರಸ್ಟ್‌ಗೆ ಸಹಕಾರ ನೀಡಿದವರನ್ನು ಸನ್ಮಾನಿಸಲಾಯಿತು.

ಟ್ರಸ್ಟ್ ಸಾಧನೆಯ ಕೈಪಿಡಿ ಲೋಕಾರ್ಪಣೆಗೊಳಿಸಲಾಯಿತು.

## ಆರೋಗ್ಯ ಪೂರ್ಣ ಜಿಲ್ಲೆಗೆ ಕ್ರಮ: ಮಲ್ಲಿಕಾರ್ಜುನ್

**ನಗರದ ಖಾಸಗಿ ಮತ್ತು ಸರ್ಕಾರಿ ಆರೋಗ್ಯ ವ್ಯವಸ್ಥೆ ಬಳಸಿಕೊಂಡು ಇಡೀ ಜಿಲ್ಲೆಯನ್ನು ಆರೋಗ್ಯ ಪೂರ್ಣ ವಾಗಿ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾವುಗು ವುದು ಎಂದು ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿಗಳೂ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು. 500 ಜನರಿಗೆ ಓರ್ವ ವೈದ್ಯ ಎನ್ನುವ ನಿಯಮದ ಪ್ರಕಾರ, ದಾವಣಗೆರೆಯಲ್ಲಿ 5000 ಸಾವಿರ ಹಾಸಿಗೆಯ ಆಸ್ಪತ್ರೆಗಳಿವೆ. ಈ ಎಲ್ಲಾ ಅಂಕಿ ಸಂಖ್ಯೆ ಗಳನ್ನಿಟ್ಟುಕೊಂಡು ಇಡೀ ಜಿಲ್ಲೆಯಲ್ಲಿ ಆರೋಗ್ಯಕರ ವಾತಾವರಣ ನಿರ್ಮಾಣ ಮಾಡಲಾಗುವುದು ಎಂದರು.**

## ಸಹಾಯವೇ ಸಮಾಜ ಸೇವೆ: ಎಸ್ಸೆಸ್

ಜನರಿಗೆ ಸಹಾಯ ಮಾಡಿದರೆ ಸಮಾಜ ಸೇವೆ ಮಾಡಿದಂತೆ ಎಂದು ಎಸ್.ಎಸ್ ಕೇರ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರೂ, ಶಾಸಕರೂ ಆದ ಶಾಮನೂರು ಶಿವಶಂಕರಪ್ಪ ಹೇಳಿದರು. ಕಾರ್ಯಕ್ರಮದಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಅಂತರ್ಜಾಲ ತಾಣ ಉದ್ಘಾಟಿಸಿ ಮಾತನಾಡಿದ ಅವರು, ಆರಂಭದಲ್ಲಿ ಎಸ್ಎಸ್ ಕೇರ್ ಟ್ರಸ್ಟಿಗೆ 10 ಕೋಟಿ ರೂ ಠೇವಣಿ ನೀಡಿ ಅದರಿಂದ ಬರುವ ಬಡ್ಡಿ ಹಣದಲ್ಲಿ ಆರೋಗ್ಯ ಸೇವೆ ನೀಡಲಾಗುತಿತ್ತು. ಇದೀಗ ಮತ್ತೆ 10 ಕೋಟಿ ರೂ ಠೇವಣಿ ಸೇರಿ ಒಟ್ಟು 20 ಕೋಟಿ ರೂ ಠೇವಣಿ ಹಣದಿಂದ ಬರುವ ಬಡ್ಡಿಯಲ್ಲಿ ಜನರಿಗೆ ಇನ್ನೂ ಉತ್ತಮ ಆರೋಗ್ಯ ಸೇವೆ ನೀಡಲು ನಿರ್ಧರಿಸಲಾಗಿದೆ ಎಂದರು.

## ಭ್ರೂಣ ಹತ್ಯೆ ಕುರಿತ ಜಾಗೃತಿ ಮೂಡಿಸಿ

**(1ನೇ ಪುಟದಿಂದ) ನಡೆಯುತ್ತಿವೆ ಎಂದು ಸಮೀಕ್ಷೆಗಳು ಹೇಳುತ್ತವೆ. ವಿಶ್ವಸಂಸ್ಥೆಯ ಪ್ರಕಾರ ಭಾರತದಲ್ಲಿ 2007ರಲ್ಲಿ ದಿನಕ್ಕೆ 2 ಸಾವಿರದಂತೆ ಒಂದು ವರ್ಷದಲ್ಲಿ 7.30 ಲಕ್ಷ ಭ್ರೂಣಹತ್ಯೆಯಾಗಿವೆ. ಇಂತಹ ಮಾರಣಹೋಮದ ವಿರುದ್ಧ ಜನಜಾಗೃತಿ ನಡೆಯಬೇಕು ಎಂದರು.**

## ಜಿಲ್ಲಾದ್ಯಂತ ವಿಸ್ತರಣೆ ಗುರಿ

**(1ನೇ ಪುಟದಿಂದ) ಸಹಕಾರದಿಂದ ಐದು ವರ್ಷ ಪೂರೈಸಿದೆ ಎಂದರು.**

**ಸ್ಪಂದನ, ಪರಿವರ್ತನ, ಮುಗುಳ್ನಗೆ ಕಾರ್ಯಕ್ರಮಗಳ ಮೂಲಕ ಮಕ್ಕಳು, ಮಹಿಳೆಯರ ಆರೋಗ್ಯಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿದೆ. ಮುಂದಿನ ದಿನಗಳಲ್ಲಿ ಪ್ರತಿ ಮಹಿಳೆಯ ಕ್ಯಾನ್ಸರ್ ತಪಾಸಣೆ ನಡೆಸುವ ಉದ್ದೇಶವಿದೆ ಎಂದರು.**


## ಹಳೇಬಾತಿ ಮಠದ ರೇವಣಸಿದ್ದಯ್ಯ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ ಮಠದ ರೇವಣಸಿದ್ದಯ್ಯ (67) ಇವರು ದಿನಾಂಕ 07.03.2024ರ ಗುರುವಾರ ಮಧ್ಯಾಹ್ನ 3.30ಕ್ಕೆ ಶಿವಾಧೀನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 08.03.2024ರ ಶುಕ್ರವಾರ ಮಧ್ಯಾಹ್ನ 12ಕ್ಕೆ ಹಳೇಬಾತಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


# ಕೇಂದ್ರ ನೌಕರರ ತುಟ್ಟಿ ಭತ್ಯೆ ಶೇ.4ರಷ್ಟು ಹೆಚ್ಚಳ

ನವದೆಹಲಿ, ಮಾ. 7 – ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆಯನ್ನು ಶೇ.4ರಷ್ಟು ಹೆಚ್ಚಿಸಲು ಕೇಂದ್ರ ಸಂಪುಟ ಸಮ್ಮತಿಸಿದೆ. ಇದು 49.18 ಲಕ್ಷ ನೌಕರರು ಹಾಗೂ 67.95 ಲಕ್ಷ ಪಿಂಚಣಿದಾರರಿಗೆ ನೆರವಾಗಲಿದೆ. ಜನವರಿ 1, 2024ರಿಂದಲೇ ಹೆಚ್ಚಳ ಅನ್ವಯವಾಗಲಿದೆ. ಇದಕ್ಕಾಗಿ ಸರ್ಕಾರ 12,868 ಕೋಟಿ ರೂ.ಗಳನ್ನು ಪಾವತಿಸಲಿದೆ. ಸರ್ಕಾರದ ಕ್ರಮದಿಂದ ಒಟ್ಟಾರೆ ತುಟ್ಟಿ ಭತ್ಯೆ ಪ್ರಮಾಣ ಶೇ.50ಕ್ಕೆ ತಲುಪಲಿದೆ.

# ನಿಟುವಳ್ಳಿಯಲ್ಲಿಂದು ವಿಶೇಷ ಪೂಜೆ

ದಾವಣಗೆರೆ - ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರೀ ಈಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆಗಳನ್ನು ಇಂದು ಬೆಳಿಗ್ಗೆಯಿಂದಲೇ ಹಮ್ಮಿಕೊಳ್ಳಲಾಗಿದೆ. ನಾಳೆ ಬೆಳಿಗ್ಗೆ 8 ರಿಂದ ಪ್ರಸಾದದ ವ್ಯವಸ್ಥೆ ಇರುತ್ತದೆ.

# ಹಳೇ ಕುಂದವಾಡ ಇಂದು ಹೋಮ

ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಇಂದು ಬೆಳಿಗ್ಗೆ 9 ಕ್ಕೆ ಧ್ವಜಾರೋಹಣ, ಮಹಾರುದ್ರ, ಮಹಾಮೃತ್ಯುಂಜಯ ಹೋಮ ನಡೆಯಲಿದೆ. ಶ್ರೀ ಕರಿಸಬವೇಶ್ವರ ಸ್ವಾಮಿ ಪುಣ್ಯಕ್ಷೇತ್ರದ ಧರ್ಮಾಧಿಕಾರಿ ಜೆ. ರಾಜಣ್ಣ ನೇತೃತ್ವ ವಹಿಸಿಕೊಳ್ಳಲಿದ್ದಾರೆ.


## ಕಂದಗಲ್ಲು ಗ್ರಾಮದ ವಿದ್ಯಾವತಿ ನಿಧನ



ಮೂಲತಃ ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದವರೂ, ಪಶು ಸಂಗೋಪನಾ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕರೂ ಆಗಿದ್ದ **ದಿ. ಡಾ. ಕೆ.ಜಿ. ಧನ್ಯ ಕುಮಾರ್** ಅವರ ಧರ್ಮಪತ್ನಿ

**ಶ್ರೀಮತಿ ವಿದ್ಯಾವತಿ ಎಂ.ಕೆ.**

ಅವರು ದಿನಾಂಕ 07.03.2024ರ ಗುರುವಾರ ಮಧ್ಯಾಹ್ನ 2.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು.

ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 08.03.2024ರ ಶುಕ್ರವಾರ ಬೆಳಿಗ್ಗೆ 9.30ರವರೆಗೆ ದಾವಣಗೆರೆ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರ ಸ್ವಾಮಿ ಮಂಟಪದ ಎದುರಿನ ಮೃತರ ಸ್ವಗೃಹದಲ್ಲಿ ಇಡಲಾಗುವುದು. ನಂತರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದಲ್ಲಿರುವ ಜಮೀನಿನನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**


# ಮಾವಿನಹೊಳೆಯಲ್ಲಿ ಇಂದಿನಿಂದ ಶಿವರಾತ್ರಿ ಮಹೋತ್ಸವ



ಚನ್ನಗಿರಿ ತಾಲ್ಲೂಕಿನ ಸುಪ್ರಸಿದ್ಧ ಸುಕ್ಷೇತ್ರ ಮಾವಿನ ಹೊಳೆ ಶ್ರೀ ಗುರುಮಹಾರುದ್ರ ಸ್ವಾಮಿ ಮಹಾಶಿವರಾತ್ರಿ ಕಾರ್ಯಕ್ರಮವು ಇಂದಿನಿಂದ ದಿನಾಂಕ 10ರ ಭಾನುವಾರದವರೆಗೆ ನಡೆಯಲಿದೆ.

ಇಂದು ರಾತ್ರಿ ಶ್ರೀ ರೇಣುಕಾ ಶಿವಚಾರ್ಯ ಸ್ವಾಮೀಜಿ ತಾವರೆಕೆರೆ ಇವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಗುರು ಮಹಾರುದ್ರಸ್ವಾಮಿಯ ಅಡ್ಡಪಲ್ಲಕ್ಕಿ ಉತ್ಸವವು ಬಾಣ ಬಿರುಸು, ಪುರಂತರ ಉರವಣೆ, ವೀರಗಾಸೆ, ನೃತ್ಯ, ಭಜನೆ, ಡೊಳ್ಳು ಕುಣಿತ, ಮಂಗಳವಾದ್ಯಗಳೊಂದಿಗೆ ಶ್ರೀಮಠಕ್ಕೆ ಆಗಮಿಸುವುದು. ನಂತರ ಬೆಳಗಿನ ಜಾವ ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ಮಹಾರುದ್ರಾಭಿಷೇಕ ಅಷ್ಟೋತ್ತರ, ಸಹಸ್ರ ಬಿಲ್ವಾರ್ಚನೆ ನಂತರ ಪ್ರಸಾದ ವಿನಿಯೋಗ ಕಾರ್ಯಕ್ರಮವು ಜರುಗುವುದು.

ನಾಳೆ ಶನಿವಾರ ಬೆಳಿಗ್ಗೆ ಶ್ರೀ ಗುರುಮಹಾರುದ್ರಾ ಸ್ವಾಮಿಗೆ ಮಹಾಪೂಜೆ, ಮಂಗಳಾರತಿ, ಪ್ರಸಾದ ವಿನಿಯೋಗ ಸೇವಾ ಕಾರ್ಯ ಜರುಗುವುದು. ದಿನಾಂಕ 10ರ ಭಾನುವಾರ ಬೆಳಿಗ್ಗೆ 11.30ಕ್ಕೆ ಶ್ರೀ ಭದ್ರಕಾಳಿ ಅಮ್ಮನವರ ಜಾತ್ರೆ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮವಿದೆ.

# ಕೇಂದ್ರದ ಯೋಜನೆಗಳಿಂದ ದೇಶ ಸುಭಿಕ್ಷ

**(1ನೇ ಪುಟದಿಂದ)** ಜೀವನ್ ಮಿಷನ್‌ನಿಂದ 24 ಗಂಟೆ ಕುಡಿಯುವ ನೀರು ತಲುಪಿಸುವ ಕಾಮಗಾರಿ ನಡೆಯುತ್ತಿದೆ ಎಂದು ಸಿದ್ದೇಶ್ವರ್ ಹೇಳಿದರು.

ಗುರುವಾರ ಜಿಲ್ಲೆಗೆ 25 ಟನ್ ಭಾರತ್ ರೈಸ್ ಬಂದಿದ್ದು, 10 ಕೆಜಿ ಬ್ಯಾಗ್ ಅನ್ನು 290 ರೂ.ಗೆ ಮಾರಾಟ ಮಾಡಲಾಗುತ್ತಿದೆ ಎಂದು ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್ ಹೇಳಿದರು.

ಪ್ರತಿ ಮನೆಯ ಮೂವರು ಅವರವರ ಮೊಬೈಲ್ ಸಂಖ್ಯೆ ನೀಡಿ, ತಲಾ ಒಂದು ಬ್ಯಾಗ್ ಅಕ್ಕಿ ಪಡೆಯಲು ಅವಕಾಶವಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆಯುವಂತೆ ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್, ಮಹಾನಗರ ಪಾಲಿಕೆ ಉಪ ಮೇಯರ್ ಯಶೋಧ ಯಗ್ಗಪ್ಪ, ಪ್ರತಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್, ಸದಸ್ಯ ಆರ್.ಎಲ್. ಶಿವಪ್ರಕಾಶ್, ಮುಖಂಡರಾದ ಬಿ.ಟಿ. ಸಿದ್ದಪ್ಪ, ಶಿವನಗೌಡ ಪಾಟೀಲ್, ಜಿ.ಎಸ್. ಶ್ಯಾಮ್, ಅತಿಥ್ ಅಂಬರ್‌ಕರ್, ಬಿ.ಎಂ. ಸತೀಶ್ ಕೊಳೇನಹಳ್ಳಿ, ಎಂ.ವಿ. ಜಯಪ್ರಕಾಶ್ ಮಾಗಿ ಮತ್ತಿತರರಿದ್ದರು.

# ವಚನ ವಿವಿ ಸ್ಥಾಪನೆ

**(1ನೇ ಪುಟದಿಂದ)** ವಚನಗಳ ಪ್ರತಿ ಅಕ್ಷರ ಜನರ ಎದೆಗೆ ಇಳಿಯಬೇಕು. ಆ ಮೂಲಕ ಬಸವಣ್ಣನವರ ಸಮಸಮಾಜದ ಕನಸು ಸಾಕಾರಗೊಳ್ಳಬೇಕು. ಇದಕ್ಕಾಗಿ ವಚನ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರು ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಬಿ.ಆರ್.ಪಾಟೀಲ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಗೌರವಾಧ್ಯಕ್ಷ ಡಾ. ಗೊ.ರು. ಚನ್ನಬಸಪ್ಪ, ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ , ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಪೌರಾಡಳಿತ, ಹಜ್ ಸಚಿವ ರಹೀಂಖಾನ್, ಮಾಜಿ ಸಚಿವ ರಾಜಶೇಖರ ಪಾಟೀಲ, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್, ವಿಜಯ್ ಸಿಂಗ್, ಶಾಸಕ ಚನ್ನಾರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

# ಯುಕೋ ಬ್ಯಾಂಕ್ ಹಗರಣ : 67 ತಾಣಗಳಲ್ಲಿ ಸಿಬಿಐ ಶೋಧ

ನವದೆಹಲಿ, ಮಾ. 7 – ಯುಕೋ ಬ್ಯಾಂಕ್‌ನ ಐ.ಎಂ.ಪಿ.ಎಸ್. ಹಗರಣಕ್ಕೆ ಸಂಬಂಧಿಸಿದಂತೆ ರಾಜಸ್ಥಾನ ಹಾಗೂ ಮಹಾರಾಷ್ಟ್ರದ ಏಳು ನಗರಗಳ 67 ತಾಣಗಳಲ್ಲಿ ಸಿ.ಬಿ.ಐ. ಶೋಧ ನಡೆಸಿದೆ.

ಕಳೆದ ವರ್ಷ ನವೆಂಬರ್ 10ರಿಂದ 13ರ ನಡುವೆ ನಡೆಸಲಾದ 8.53 ಲಕ್ಷ ಐ.ಎಂ.ಪಿ.ಎಸ್. ವಹಿವಾಟುಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

ಏಳು ಖಾಸಗಿ ಬ್ಯಾಂಕುಗಳ 14,600 ಖಾತೆಗಳ ಮೂಲಕ ಐ.ಎಂ.ಪಿ.ಎಸ್. ವಹಿವಾಟು ನಡೆಸಲಾಗಿತ್ತು. ಈ ವಹಿವಾಟಿನಲ್ಲಿ 41 ಸಾವಿರಕ್ಕೂ ಹೆಚ್ಚು ಯುಕೋ ಬ್ಯಾಂಕ್ ಖಾತೆದಾರರ ಖಾತೆಗಳಿಗೆ ತಪ್ಪಾಗಿ ಹಣ ಜಮಾ ಮಾಡಲಾಗಿತ್ತು. ಮೂಲ ಬ್ಯಾಂಕುಗಳಿಂದ ಹಣ ಪಡೆಯದೇ, ಯುಕೋ ಖಾತೆಗಳಿಗೆ 820 ಕೋಟಿ ರೂ. ಸೇರ್ಪಡೆಯಾಗಿತ್ತು ಎಂದು ಸಿ.ಬಿ.ಐ. ವಕ್ತಾರರು ಹೇಳಿದ್ದಾರೆ.

ತಮ್ಮ ಖಾತೆಗಳಿಗೆ ಬಂದ ಹಣವನ್ನು ಬ್ಯಾಂಕುಗಳಿಗೆ ಮರಳಿಸದೇ, ಅದನ್ನು ಬಿಡಿಸಿಕೊಂಡವರನ್ನು ಗುರಿಯಾಗಿಟ್ಟುಕೊಂಡು ರಾಜಸ್ಥಾನ ಹಾಗೂ ಮಹಾರಾಷ್ಟ್ರಗಳಲ್ಲಿ ಶೋಧ ನಡೆಸಲಾಗಿದೆ. ಇದು ಎರಡನೇ ಸುತ್ತಿನ ಶೋಧವಾಗಿದೆ.

# ಬಿಜೆಪಿಯವು ಜಾತಿ ಆಧಾರದ ಯೋಜನೆಗಳಲ್ಲ

**(1ನೇ ಪುಟದಿಂದ)** ಜಿಲ್ಲಾಧ್ಯಕ್ಷ ಮುರಳಿ, ಲಿಂಗರಾಜ ಪಾಟೀಲ್ ಸೇರಿದಂತೆ ಮತ್ತಿತರರಿದ್ದರು.

ದಾವಣಗೆರೆ ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ಸ್ವಾಗತಿಸಿದರು. ಧಾರವಾಡ ಕ್ಲಸ್ಟರ್ ಸಂಚಾಲಕ ಹಾಗೂ ಎಂಎಲ್‌ಸಿ ನವೀನ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

## ಕರ್ನಾಟಕದಲ್ಲಿ ಐವರು ಸಿಎಂಗಳು

ಕರ್ನಾಟಕದ ಕಾಂಗ್ರೆಸ್ ಸರ್ಕಾರದಲ್ಲಿ 5 ಸಿಎಂ ಇದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಆ ಚೇರ್ ಪಡೆಯಲು ಡಮ್ಮಿ ಸಿಎಂ ಡಿಕೆ ಶಿವಕುಮಾರ್ ಕಾಯ್ತಾ ಇದ್ದಾರೆ. ಇವರಿಬ್ಬರನ್ನೂ ತೆಗೆದು ಸಿಎಂ ಚೇರ್ ಕಸಿದು ಕೂರಲು ಡಾ.ಜಿ. ಪರಮೇಶ್ವರ ಕಾಯುತ್ತಿದ್ದಾರೆ. ಈ ಮೂವರನ್ನು ತೆಗೆದು ಆ ಸಿಎಂ ಚೇರ್ ಪಡೆಯಲು ಸತೀಶ್ ಜಾರಕಿಹೊಳಿ ಕಾಯ್ತಾ ಇದ್ದಾರೆ. ಇವರೆಲ್ಲರನ್ನೂ ತೆಗೆದು ಸಿಎಂ ಚೇರ್ ಮೇಲೆ ಕೂರಲು ಪ್ರಿಯಾಂಕ್ ಖರ್ಗೆ ಕಾಯುತ್ತಿದ್ದಾರೆ. ಯಾಕೆಂದರೆ ಇವರ ತಂದೆ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಆದರೆ ಇವರೆಲ್ಲರನ್ನು ಹೊರತು ಪಡಿಸಿ ಷೆಡ್ಯೂಲ್‌ನಲ್ಲಿ ಇನ್ನೊಬ್ಬರು ಕಾಯ್ತಾ ಇದ್ದಾರೆ. ಅವರೇ ಡಾ. ಯತೀಂದ್ರ ಅವರು ಎಂದು ಕಾಂಗ್ರೆಸ್ ಸರ್ಕಾರದ ಆಂತರಿಕ ಕಚ್ಚಾಟದ ಬಗ್ಗೆ ಗೋವಾ ಸಿಎಂ ಪ್ರಮೋದ್ ಸಾವಂತ್ ವ್ಯಂಗ್ಯವಾಡಿದರು.


## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಜಾಲಿನಗರ ಪಾರ್ಕ್ ಎದುರು ವಾಸಿ ಶ್ರೀ ರೇಣುಕಯಲ್ಲಮ್ಮ ದೇವಸ್ಥಾನ ಕಮಿಟಿಯ ಹಿರಿಯ ಸದಸ್ಯರಾದ

**ಶ್ರೀ ಎನ್.ಡಿ. ರೇವಣಸಿದ್ದಪ್ಪ**

ಇವರು ದಿನಾಂಕ : 7.3.2024ರ ಗುರುವಾರ ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ರೇಣುಕಯಲ್ಲಮ್ಮ ದೇವಸ್ಥಾನ ಕಮಿಟಿಯ ಅಧ್ಯಕ್ಷರು ಮತ್ತು ಸದಸ್ಯರು, ಜಾಲಿನಗರ, ದಾವಣಗೆರೆ.**

## 15ನೇ ವರ್ಷದ ಪುಣ್ಯಸ್ಮರಣೆ



**ದಿ॥ ಬಿ. ಗುರುದೇವ್**

(ಜಿಲ್ಲಾ ದಸ್ತಾವೇಜು ಬರಹಗಾರರು)

ನೀವು ನಮ್ಮನ್ನಗಲಿ ಇಂದಿಗೆ (08.03.2024) ಹದಿನೈದು ವರ್ಷಗಳಾದವು. ನಿಮ್ಮ ಸವಿನೆನಪು ಅಚ್ಚಳಿಯದೇ ಉಳಿದಿದೆ. ನಿಮ್ಮ ಆದರ್ಶ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಧರ್ಮಪತ್ನಿ : **ಶ್ರೀಮತಿ ಲಕ್ಷ್ಮಿದೇವಿ**
ಮಕ್ಕಳು : **ಬಿ.ಜಿ. ಅರುಣ್‌ಕುಮಾರ್, ಬಿ.ಜಿ. ಯೋಗಿತ**
ಸೊಸೆ: **ಸಪ್ನ**, ಮೊಮ್ಮಗಳು : **ನೇಹಲ್**
ಹಾಗೂ **ಪಿ.ಜೆ. ತಿಪ್ಪೇಸ್ವಾಮಿ** (ದಸ್ತಾವೇಜು ಬರಹಗಾರರು)
**ಎಸ್.ಬಿ.ಶಶಿಧರ್ ಹಾಗೂ ಸಹೋದರರು, ಬಂಧು-ಮಿತ್ರರು.**


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಭಾರತೀಯ ನೌಕಾ ಪಡೆಯಿಂದ 21 ಜನರ ರಕ್ಷಣೆ**
ನವದೆಹಲಿ : ಏಡನ್ ಕೊಲ್ಲಿಯಲ್ಲಿ ಸಾಗುತ್ತಿದ್ದ ಸರಕು ಸಾಗಣೆ ಹಡಗಿನ ಮೇಲೆ ಹೌತಿ ಉಗ್ರರು ನಡೆಸಿದ ದಾಳಿಯಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ 21 ಜನರನ್ನು ಭಾರತೀಯ ನೌಕಾಪಡೆ ರಕ್ಷಿಸಿದೆ. ರಕ್ಷಿಸಲ್ಪಟ್ಟವರಲ್ಲಿ ಮೂವರು ಭಾರತೀಯರು ಸೇರಿದ್ದಾರೆ. ಹೌತಿ ಉಗ್ರರು ನಡೆಸಿದ ದಾಳಿಯಲ್ಲಿ ಹಲವರು ಸಾವನ್ನಪ್ಪಿದ್ದರು. ಇದೇ ಮೊದಲ ಬಾರಿಗೆ ಉಗ್ರರ ದಾಳಿಯಲ್ಲಿ ಸಾವುಗಳು ಸಂಭವಿಸಿವೆ. ಐಎನ್ಎಸ್ ಕೊಲ್ಕತ್ತಾ ಸಮರ ಹಡಗಿನ ಮೂಲಕ ಸಂತ್ರಸ್ತರನ್ನು ರಕ್ಷಿಸಲಾಗಿದೆ.

**ಎ.ಐ. ಯೋಜನೆಗೆ 10,372 ಕೋಟಿ ರೂ ಅನುದಾನ**
ನವದೆಹಲಿ : ಎ.ಐ. ಯೋಜನೆಗಾಗಿ ಮುಂದಿನ ಐದು ವರ್ಷಗಳಿಗೆ ರೂ.10,372 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ದೇಶದಲ್ಲಿ ಎ.ಐ. ಅಭಿವೃದ್ಧಿಗೆ ಉತ್ತೇಜನ ನೀಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ.

**370ನೇ ವಿಧಿ ರದ್ದತಿಯಿಂದ ಕಾಶ್ಮೀರದಲ್ಲಿ ಪ್ರಗತಿ**
ನವದೆಹಲಿ : ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ 370ನೇ ವಿಧಿ ರದ್ದುಗೊಳಿಸಿದ ನಂತರ ಈ ವಲಯ ಮುಕ್ತವಾಗಿ ಉಸಿರಾಡಲು ಸಾಧ್ಯವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರ ವೇಗದ ಬೆಳವಣಿಗೆ ಕಾಣಲಿದೆ ಹಾಗೂ ಉನ್ನತ ಹಂತವನ್ನು ತಲುಪಲಿದೆ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಕಾಂಗ್ರೆಸ್‌ನಿಂದ ಯುವಕರಿಗೆ ಉದ್ಯೋಗದ ಭರವಸೆ**
ಜೈಪುರ್ : ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ಯುವಕರಿಗೆ ಉದ್ಯೋಗ ಹಾಗೂ ಶಿಷ್ಯವೇತನ ನೀಡುವುದಾಗಿ ಕಾಂಗ್ರೆಸ್ ಪಕ್ಷ ತಿಳಿಸಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿದ ಭರವಸೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಈ ಘೋಷಣೆ ಮಾಡಿದೆ.

**ಉಜ್ವಲ ಸಬ್ಸಿಡಿ ಮುಂದುವರೆಸಲು ಕೇಂದ್ರ ಸಂಪುಟದ ನಿರ್ಧಾರ**
ನವದೆಹಲಿ : ಅಡುಗೆ ಅನಿಲದ ಸಿಲಿಂಡರ್‌ಗಳಿಗೆ ಉಜ್ವಲ ಯೋಜನೆಯಡಿ ಪ್ರಸಕ್ತ ನೀಡಲಾಗುತ್ತಿರುವ 300 ರೂ.ಗಳ ಸಬ್ಸಿಡಿಯನ್ನು ಮುಂದಿನ ಹಣಕಾಸು ವರ್ಷಕ್ಕೂ ವಿಸ್ತರಿಸಲು ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ಲೋಕಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಮೈತ್ರಿ ಮಾತುಕತೆಗೆ ದೆಹಲಿ ತಲುಪಿದ ನಾಯ್ಡು**
ನವದೆಹಲಿ: ತೆಲುಗು ದೇಶಂ ಪಕ್ಷದ ಅಧ್ಯಕ್ಷ ಎನ್. ಚಂದ್ರ ಬಾಬು ನಾಯ್ಡು ಅವರು ಗುರುವಾರ ದೆಹಲಿಗೆ ತಲುಪಿದ್ದಾರೆ. ಅವರು ಬಿಜೆಪಿಯ ಹಿರಿಯ ನಾಯಕರನ್ನು ಭೇಟಿ ಮಾಡಲಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಟಿಡಿಪಿ ಮೈತ್ರಿ ಮಾಡಿಕೊಳ್ಳಲಿದೆ ಎಂಬ ವರದಿಗಳ ನಡುವೆ ಈ ಭೇಟಿ ಪ್ರಾಮುಖ್ಯತೆ ಪಡೆದುಕೊಂಡಿದೆ.

**ಅಕ್ರಮ ಹಣ : ಎಸ್ಪಿ ಶಾಸಕನ ಮೇಲೆ ಜಾರಿ ನಿರ್ದೇಶನಾಲಯದ ದಾಳಿ**
ಕಾನ್ಪುರ : ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಶಾಸಕ ಇರ್ಫಾನ್ ಸೋಳಂಕಿ ಹಾಗೂ ಅವರ ಕುಟುಂಬದ ಸದಸ್ಯರ ನಿವಾಸಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

## ವಿನೋಬನಗರದಲ್ಲಿ ಪಲ್ಸ್ ಪೋಲಿಯೋ



ದಾವಣಗೆರೆ, ಮಾ. 7 - ವಿನೋಬನಗರದ 3ನೇ ಮೇನ್, 1ನೇ ಕ್ರಾಸ್‌ನ ಅಂಗನವಾಡಿ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಡಾ ನಟರಾಜ್ (ವೈದ್ಯಾಧಿಕಾರಿಗಳು) ಶ್ರೀಮತಿ ಗೌರಮ್ಮ , ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ರೇಣುಕಮ್ಮ, ವಾರ್ಡಿನ ಮುಖಂಡರಾದ ಸುರೇಶ್ ಉತ್ತಂಗಿ, ಶಿವಾಜಿರಾವ್, ರಮೇಶ್, ಪ್ರದೀಪ್ ಮುಂತಾದವರು ಹಾಜರಿದ್ದರು.

## ಪಶ್ಚಿಮ ಬಂಗಾಳ ಮಹಿಳೆಯರಿಗೆ ದೇಶದಲ್ಲೇ ಸುರಕ್ಷಿತ : ಮಮತಾ

ಕೊಲ್ಕೊತಾ, ಮಾ. 7 – ಸಂದೇಶ್‌ಖಾಲಿ ಬಗ್ಗೆ ಬಿಜೆಪಿ ಅಪಪ್ರಚಾರ ಮಾಡುತ್ತಿದೆ ಎಂದು ಆರೋಪಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ರಾಜ್ಯವು ಇಡೀ ದೇಶದಲ್ಲೇ ಮಹಿಳೆಯರಿಗೆ ಅತಿ ಹೆಚ್ಚು ಸುರಕ್ಷಿತವಾಗಿ ಎಂದಿದ್ದಾರೆ.

ಕೊಲ್ಕೊತಾದಲ್ಲಿ ಮಹಿಳಾ ಹಕ್ಕುಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಸಂದೇಶ್‌ಖಾಲಿ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ನಡೆಯದೇ ಇರುವ ಘಟನೆಗಳನ್ನು ಬಿಂಬಿಸಲಾಗುತ್ತಿದೆ. ಟಿ.ಎಂ.ಸಿ. ಕಾರ್ಯಕರ್ತರೇ ತಪ್ಪು ಮಾಡಿದ್ದರೆ ಬಂಧಿಸಲು ಹಿಂಜರಿಯುವುದಿಲ್ಲ ಎಂದರು.

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ 10ರಂದು ಶಿವರಾತ್ರಿ ಅಮಾವಾಸ್ಯೆ



ದಾವಣಗೆರೆ, ಮಾ. 7- ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮದೇವಿ ದೇವಸ್ಥಾನದಲ್ಲಿ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ದಿನಾಂಕ 10ರ ಭಾನುವಾರ ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂಕಾರ ನಡೆಯುವುದು. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಬೇತೂರು ಬಸವರಾಜಪ್ಪ ಮತ್ತು ಮಕ್ಕಳು, ಬೇತೂರು ಶಕುಂತಲಮ್ಮ ಮುರುಗೇಶಪ್ಪ ಮತ್ತು ಮಕ್ಕಳು, ಶ್ರೀಮತಿ ಸೌಭಾಗ್ಯ ಜಿ.ಎಂ. ಮೋಹನ ಮತ್ತು ಮಕ್ಕಳು, ಶ್ರೀಮತಿ ವೀಣಾ ಎಸ್.ಕೆ. ರವಿ ಮತ್ತು ಮಕ್ಕಳು, ಮೊಮ್ಮಕ್ಕಳು, ದಾವಣಗೆರೆ ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಉಕ್ಕಡಗಾತ್ರಿ ಅಜ್ಜಯ್ಯನಿಗೆ ಇಂದು ಚಿನ್ನದ ಕಿರೀಟ ಧಾರಣೆ



ಸುಕ್ಷೇತ್ರ ಉಕ್ಕಡಗಾತ್ರಿಯ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನಿಗೆ ಭಕ್ತರ ನೆರವಿನಿಂದ ಮಾಡಿಸಿರುವ 2.5 ಕೆ.ಜಿ. ತೂಕದ ಚಿನ್ನದ ಕಿರೀಟವನ್ನು ಇಂದು ಬೆಳಗ್ಗೆ ಕರ್ತೃಗದ್ದುಗೆಗೆ ಅಭಿಷೇಕ, ಮಹಾಮಂಗಳಾರತಿ ನೆರವೇರಿಸಿದ ನಂತರ 12-30 ಕ್ಕೆ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿಯವರು ಅಜ್ಜಯ್ಯನಿಗೆ ಧಾರಣೆ ಮಾಡಲಿದ್ದಾರೆ ಎಂದು ಗದ್ದುಗೆ ಟ್ರಸ್ಟ್ ಕಾರ್ಯದರ್ಶಿ ಎಸ್. ಸುರೇಶ್ ತಿಳಿಸಿದ್ದಾರೆ.

ಅಜ್ಜಯ್ಯನಿಗೆ ಚಿನ್ನದ ಕಿರೀಟ ಧಾರಣೆ ಕಾರ್ಯಕ್ರಮದಲ್ಲಿ ಶಾಮನೂರು ಶಿವಶಂಕರಪ್ಪ, ಬಿ.ಪಿ. ಹರೀಶ್, ಎಸ್ ರಾಮಪ್ಪ, ಎಸ್.ಎಸ್. ಗಣೇಶ್, ನಂದಿಗಾವಿ ಶ್ರೀನಿವಾಸ್ ಮತ್ತು ಇತರರು ಭಾಗವಹಿಸಲಿದ್ದಾರೆ.

**ಜಾತ್ರೆ :** ಇದೇ ದಿನಾಂಕ 10 ರಿಂದ 17 ರವರೆಗೆ ಉಕ್ಕಡಗಾತ್ರಿಯಲ್ಲಿ ಅಜ್ಜಯ್ಯನ ಮಹಾಶಿವರಾತ್ರಿ ಜಾತ್ರೆ ಜರುಗಲಿದ್ದು, 11 ರಂದು ಅಜ್ಜಯ್ಯನ ಮಹಾರಥೋತ್ಸವ ನಡೆಯಲಿದೆ.

# ನೀರಿಲ್ಲದೇ ಬಳಲುತ್ತಿರುವ ಬೆಂಗಳೂರು



**ಆನ್‌ಲೈನ್ ಮೂಲಕ ಪಾಠ ಮಾಡಲು ಕೆಲ ಶಾಲೆಗಳ ನಿರ್ಧಾರ**

ಬೆಂಗಳೂರು, ಮಾ. 7 – ದೇಶದ ಐ.ಟಿ. ರಾಜಧಾನಿ ಎಂದೇ ಹೆಸರಾಗಿರುವ ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಉಲ್ಬಣಿಸಿದ್ದು, ಇಲ್ಲಿನ ವಿಜಯನಗರದ ಶಾಲೆಯೊಂದು ಮಕ್ಕಳು ಆನ್‌ಲೈನ್ ಮೂಲಕ ತರಗತಿಗಳಿಗೆ ಹಾಜರಾಗುವಂತೆ ತಿಳಿಸಿದೆ.

ನೀರಿನ ಕೊರತೆಯಿಂದಾಗಿ 'ತುರ್ತು' ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಆನ್‌ಲೈನ್ ಮೂಲಕ ಪಾಠ ಮಾಡುವುದಾಗಿ ಶಾಲೆ ತಿಳಿಸಿದೆ. ಬನ್ನೇರುಘಟ್ಟ ರಸ್ತೆಯಲ್ಲಿರುವ ಶಾಲೆ ಸಹ ಇದೇ ರೀತಿಯ ನಿರ್ಧಾರ ತೆಗೆದುಕೊಂಡಿದೆ.

2023ರಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿತ್ತು. ಹೀಗಾಗಿ ಬೆಂಗಳೂರು ಇತ್ತೀಚಿನ ವರ್ಷಗಳಲ್ಲೇ ಅತ್ಯಂತ ತೀವ್ರ ಸ್ವರೂಪದ ನೀರಿನ ಸಮಸ್ಯೆ ಎದುರಿಸುತ್ತಿದೆ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದರೆ ಬೆಂಗಳೂರಿನ ಕುಮಾರಕೃಪ ರಸ್ತೆಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸದ ಒಳಗೇ ನೀರಿನ ಟ್ಯಾಂಕರ್‌ಗಳು ಕಂಡು ಬಂದಿವೆ.

ಸದಾಶಿವನಗರದಲ್ಲಿರುವ ತಮ್ಮ ಮನೆಯ ಬೋರ್ ಇದೇ ಮೊದಲ ಬಾರಿಗೆ ಒಣಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಸದಾಶಿವನಗರವು ಸ್ಯಾಂಕಿ ಕೆರೆಯ ಪಕ್ಕದಲ್ಲೇ ಇದ್ದರೂ ನೀರಿನ ಪರಿಸ್ಥಿತಿ ಹದಗೆಟ್ಟಿದೆ.

ಬೆಂಗಳೂರಿನ ಬೀದಿಗಳಲ್ಲಿ ನೀರಿನ ಟ್ಯಾಂಕುಗಳು ಸಂಚರಿಸುವುದು ಈಗ ಸಾಮಾನ್ಯ ದೃಶ್ಯವಾಗಿದೆ.

ಸಾಮಾನ್ಯ ದಿನಗಳಲ್ಲಿ ನೀರಿನ ಟ್ಯಾಂಕರ್‌ಗಳ ಬೆಲೆ 700 ರಿಂದ 800 ರೂ. ಆಗಿರುತ್ತಿತ್ತು. ಈಗ ಅತಿಯಾದ ಬೇಡಿಕೆಯಿಂದ ನೀರಿನ ಬೆಲೆ 1,500 ರೂ.ಗಳಿಂದ 1,800 ರೂ.ಗಳಿಗೆ ತಲುಪಿದೆ ಎಂದು ಶಿವಕುಮಾರ್ ಹೇಳಿದ್ದಾರೆ.

ನಮ್ಮ ಮನೆಯಲ್ಲಿ ಆರು ಜನರಿದ್ದೇವೆ. ಒಂದು ಟ್ಯಾಂಕ್ ನೀರು ವಾರಕ್ಕೆ ಸಾಲುತ್ತದೆ. ಹೀಗಾದರೆ ತಿಂಗಳಿಗೆ ನೀರಿಗಾಗಿ 9 ಸಾವಿರ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆ. ಎಷ್ಟು ದಿನ ಈ ರೀತಿ ಹಣ ಖರ್ಚು ಮಾಡಲು ಸಾಧ್ಯ? ಎಂದು ಉತ್ತರಹಳ್ಳಿಯ ನಿವಾಸಿ ಶರಶ್ಚಂದ್ರ ಪ್ರಶ್ನಿಸಿದ್ದಾರೆ.

ಖಾಸಗಿಯವರಿಂದ ನೀರಿನ ಟ್ಯಾಂಕ್ ಹಾಗೂ ಖಾಸಗಿ ಬೋರ್‌ವೆಲ್‌ಗಳನ್ನು ವಶಪಡಿಸಿಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಹಾಲಿನ ಟ್ಯಾಂಕುಗಳನ್ನೂ ನೀರು ಪೂರೈಕೆಗಾಗಿ ಬಳಸಲಾಗುವುದು. ಟ್ಯಾಂಕರ್ ನೀರಿಗೆ ದರ ನಿಗದಿ ಪಡಿಸಲು ರಾಜ್ಯ ಸರ್ಕಾರ ಪರಿಶೀಲಿಸುತ್ತಿದೆ.

ಬೆಂಗಳೂರಿನಲ್ಲಿ ಮಾರ್ಚ್ ತಿಂಗಳಲ್ಲಿ ಬೇಸಿಗೆ ಆರಂಭವಾಗುತ್ತಿತ್ತು. ಈ ಬಾರಿ ಫೆಬ್ರವರಿ ಮೂರು ಹಾಗೂ ನಾಲ್ಕನೇ ವಾರದಲ್ಲೇ ಬೇಸಿಗೆಯ ಬೇಗೆ ಆರಂಭವಾಗಿದೆ. ಇದು ಪರಿಸ್ಥಿತಿ ಇನ್ನಷ್ಟು ಉಲ್ಬಣಿಸುವಂತೆ ಮಾಡಿದೆ.

ಮಂಡ್ಯದ ಕೆ.ಆರ್.ಎಸ್.ನಿಂದ ಬೆಂಗಳೂರಿಗೆ ನೀರು ಪೂರೈಸಲಾಗುತ್ತಿತ್ತು. ಅಣೆಕಟ್ಟೆಯಲ್ಲಿ ಈಗ ಸಾಕಷ್ಟು ನೀರಿಲ್ಲದ ಕಾರಣ ಸಮಸ್ಯೆ ಉಲ್ಬಣಿಸಿದೆ ಎಂದು ಬೆಂಗಳೂರು ನಗರ ಪಾಲಿಕೆ ಅಧಿಕಾರಿಗಳು ಹೇಳುತ್ತಿದ್ದಾರೆ.

# ಕಾಲೇಜು ಕ್ಯಾಂಪಸ್‌ನಲ್ಲಿ ಹೊರಗಿನ ವ್ಯಕ್ತಿಗಳು ಬಾರದಂತೆ ಎಚ್ಚರಿಕೆ ವಹಿಸಿ





**ನಗರದಲ್ಲಿನ ಕಾಲೇಜುಗಳ ಪ್ರಾಂಶುಪಾಲರೊಂದಿಗೆ ಸಭೆ ನಡೆಸಿದ ಎಸ್ಪಿ ಉಮಾ ಪ್ರಶಾಂತ್**

ದಾವಣಗೆರೆ, ಮಾ.7 - ಎಸ್ಪಿ ಉಮಾ ಪ್ರಶಾಂತ್ ಅಧ್ಯಕ್ಷತೆಯಲ್ಲಿ ಶನಿವಾರ ಜಿಲ್ಲಾ ಪೊಲೀಸ್ ಕಛೇರಿ ಸಭಾಂಗಣದಲ್ಲಿ ನಗರದ ಪಿಯು ಮತ್ತು ಪದವಿ ಕಾಲೇಜುಗಳ ಪ್ರಾಂಶುಪಾಲರುಗಳೊಂದಿಗೆ ಸಭೆ ನಡೆಯಿತು.

ಈ ವೇಳೆ ಪ್ರಾಂಶುಪಾಲರ ಅಹವಾಲುಗಳನ್ನು ಆಲಿಸಿದ ಎಸ್ಪಿ, ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು.

ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಪಿಯು ಮತ್ತು ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು ಕಾಲೇಜು ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿದರು.

ಪೊಲೀಸ್ ತುರ್ತು ಸೇವೆಗಾಗಿ ತುರ್ತು ಸಹಾಯವಾಣಿ 112 ಇದ್ದು, ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ತುರ್ತು ಸೇವೆಗಾಗಿ 112 ಗೆ ಕರೆ ಮಾಡಲು ತಿಳಿಸಿದರು. ಅಗತ್ಯವಿದ್ದರೆ ನೇರವಾಗಿ ಪೊಲೀಸ್ ಅಧಿಕಾರಿಗಳಿಗೆ ಕರೆ ಮಾಡಲು ತಿಳಿಸಿದರು.

ತುರ್ತು ಸೇವೆಗಾಗಿ 'ದಾವಣಗೆರೆ ಸುರಕ್ಷಾ' ಆಪ್ ಅನ್ನು ಜಾರಿಗೆ ತಂದಿದ್ದು, ನಗರದ ವ್ಯಾಪ್ತಿಯಲ್ಲಿ ಯಾವುದೇ ಆಪತ್ತಿನ ಸಮಯದಲ್ಲಿ ಹಾಗೂ ಇತರೆ ತುರ್ತು ಸೇವೆಗೆ ಬಳಸಬಹುದಾಗಿರುತ್ತದೆ.

ಪ್ರಾಂಶುಪಾಲರುಗಳು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಿಗಾವಹಿಸುವುದು ಹಾಗು ವಿದ್ಯಾರ್ಥಿಗಳ ಪೋಷಕರೊಂದಿಗೆ ಸಭೆ ನಡೆಸಿ ತಮ್ಮ ಮಕ್ಕಳ ನಡೆ ನುಡಿಗಳ ಬಗ್ಗೆ ಅವರುಗಳ ಅಭ್ಯಸಗಳ ಬಗ್ಗೆ ನಿಗಾವಹಿಸುವಂತೆ ಸೂಕ್ತ ತಿಳುವಳಿಕೆ ನೀಡಲು ತಿಳಿಸಿದರು. ಕಾಲೇಜು ಆವರಣದಲ್ಲಿ ಅಥವಾ ಕ್ಯಾಂಪಸ್‌ಗಳಲ್ಲಿ ಅನಾವಶ್ಯಕವಾಗಿ ಹೊರಗಿನ ವ್ಯಕ್ತಿಗಳಿಗೆ ಪ್ರವೇಶಿಸದಂತೆ ಗಮನಹರಿಸಿಬೇಕು, ಈ ಬಗ್ಗೆ ಪ್ರಾಂಶುಪಾಲರುಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ವಿವಿಧ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ತಮ್ಮ ಕಾಲೇಜುಗಳಲ್ಲಿನ ಸಮಸ್ಯೆಗಳ ಬಗ್ಗೆ ಗಮನಕ್ಕೆ ತಂದರು

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ ಎಂ ಸಂತೋಷ , ನಗರ ಡಿವೈಎಸ್ಪಿ ರವರಾದ ಶ್ರೀ ಮಲ್ಲೇಶ್ ದೊಡ್ಮನಿ ರವರು ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ನಗರದ ಎಲ್ಲಾ ಪಿಯು ಮತ್ತು ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು ಉಪಸ್ಥಿತರಿದ್ದರು.

# ಕರುಣಾಕರನ್ ಪುತ್ರಿ ಬಿಜೆಪಿಗೆ ಸೇರ್ಪಡೆ



ನವದೆಹಲಿ, ಮಾ. 7 – ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್‌ನ ದಿವಂಗತ ನಾಯಕ ಕೆ. ಕರುಣಾಕರನ್ ಅವರ ಪುತ್ರಿ ಪದ್ಮಜಾ ವೇಣುಗೋಪಾಲ್ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಲೋಕಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಈ ಬೆಳವಣಿಗೆಯಾಗಿದೆ.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಪದ್ಮಜಾ, ನನ್ನ ದೂರುಗಳ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಸಂಪರ್ಕಿಸಲು ಹಲವು ಬಾರಿ ಪ್ರಯತ್ನ ನಡೆಸಿದೆ. ಆದರೆ, ಭೇಟಿಗೆ ಸಮಯ ನೀಡಲಿಲ್ಲ ಎಂದು ಆರೋಪಿಸಿದರು.

ಹಲವಾರು ವರ್ಷಗಳಿಂದ ಕಾಂಗ್ರೆಸ್ ಕಾರ್ಯನಿರ್ವಹಣೆ ಬಗ್ಗೆ ಅಸಮಾಧಾನವಿತ್ತು. ವಿಶೇಷವಾಗಿ ಕಳೆದ ವಿಧಾನಸಭಾ ಚುನಾವಣೆಯ ನಂತರ ಅಸಮಾಧಾನವಿತ್ತು. ಶಾಂತಿಯುತವಾಗಿ ಕೆಲಸ ಮಾಡಲು ಬಯಸಿದ್ದೆ ಎಂದವರು ಹೇಳಿದ್ದಾರೆ.

ನನ್ನ ತಂದೆಗೂ ಸಹ ಕಾಂಗ್ರೆಸ್ ಬಗ್ಗೆ ಇದೇ ಅಸಮಾಧಾನವಿತ್ತು. ಕಾಂಗ್ರೆಸ್ ಪಕ್ಷದಲ್ಲಿ ಈಗ ಯಾವುದೇ ನಾಯಕತ್ವ ಇಲ್ಲ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಬಗ್ಗೆ ಅಪಾರ ಗೌರವ ಇದೆ. ಆದರೆ ಅವರನ್ನು ಭೇಟಿ ಮಾಡಲು ಸಾಧ್ಯವಾಗುತ್ತಿಲ್ಲ. ಅವರು ಯಾರ ಭೇಟಿಗೂ ಸಮಯ ನೀಡುತ್ತಿಲ್ಲ ಎಂದು ಪದ್ಮಜಾ ಹೇಳಿದ್ದಾರೆ.

ಪದ್ಮಜಾ ಪಕ್ಷ ತೊರೆದಿರುವುದು ಕೇರಳ ರಾಜಕೀಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ಕಾಂಗ್ರೆಸ್ ಪಕ್ಷ ಪೇಚಿಗೆ ಸಿಲುಕಿದೆ. ಪದ್ಮಜಾ ಬಿಜೆಪಿಗೆ ಸೇರ್ಪಡೆಯಾಗಿರುವುದು ಕಾಂಗ್ರೆಸ್ ಪಕ್ಷದ ಕುಸಿತವನ್ನು ಸೂಚಿಸುತ್ತಿದೆ ಎಂದು ಕೇಸರಿ ಪಕ್ಷ ಹೇಳುತ್ತಿದೆ.

ಪದ್ಮಜಾ ಬಿಜೆಪಿಗೆ ಸೇರ್ಪಡೆಯಾಗಿರುವುದು ಕಾಂಗ್ರೆಸ್‌ಗೆ ಮಾಡಿರುವ ಮೋಸ ಹಾಗೂ ವಂಚನೆ ಎಂದು ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ. ಸುಧಾಕರನ್ ಹೇಳಿದ್ದಾರೆ.

ಈ ಬಗ್ಗೆ ಭಾವುಕ ಪ್ರತಿಕ್ರಿಯೆ ನೀಡಿರುವ ಹಿರಿಯ ಸಂಸದ ಹಾಗೂ ಪದ್ಮಜಾ ಸಹೋದರ ಕೆ. ಮುರಳೀ ಧರನ್, ಸಹೋದರಿ ಜೊತೆಗಿನ ಸಂಬಂಧ ಕಡಿದುಕೊಳ್ಳುತ್ತಿರುವುದಾಗಿ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಮೇಲಿನ ವಿಶ್ವಾಸ ಕುಸಿಯುತ್ತಿದೆ ಎಂದು ಹೇಳಿರುವ ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಎಂ.ವಿ. ಗೋವಿಂದನ್, ನಾಳೆ ಕಾಂಗ್ರೆಸ್‌ನಿಂದ ಆಯ್ಕೆಯಾದವರು ಬಿಜೆಪಿಗೆ ಹೋಗುವುದಿಲ್ಲ ಎಂಬ ಯಾವುದೇ ಗ್ಯಾರಂಟಿ ಇಲ್ಲ ಎಂದಿದ್ದಾರೆ.

ಕಾಂಗ್ರೆಸ್ ಹಾಗೂ ಬಿಜೆಪಿ ಸಿದ್ಧಾಂತಗಳ ನಡುವೆ ಯಾವುದೇ ವ್ಯತ್ಯಾಸ ಇಲ್ಲ.

ಕಾಂಗ್ರೆಸ್ ಪಕ್ಷ ಮೃದು ಹಿಂದುತ್ವ ಧೋರಣೆ ಹೊಂದಿದೆ. ಹೀಗಾಗಿ ಆ ಪಕ್ಷದವರು ಬಿಜೆಪಿ ಸೇರುವುದು ಸುಲಭವಾಗುತ್ತಿದೆ ಎಂದು ಗೋವಿಂದನ್ ಹೇಳಿದ್ದಾರೆ.

## ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಮಹಾ ಶಿವರಾತ್ರಿ




ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಶ್ರೀ ಮಹಾಶಿವರಾತ್ರಿ ಪರ್ವ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 6 ಗಂಟೆಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ ನೆರವೇರಿಸಲಾಗುವುದು.

ಸಂಜೆ 7.30ಕ್ಕೆ ಭಜನಾ ಕಾರ್ಯಕ್ರಮ ಏರ್ಪಡಿಸಲಾಗಿರುತ್ತದೆ.

ನಾಳೆ ಶನಿವಾರ ಮಧ್ಯಾಹ್ನ 12 ರಿಂದ ಅನ್ನ ಸಂತರ್ಪಣೆ ನಡೆಯಲಿದೆ.

# ವಿಠಲ ರುಖುಮಾಯಿ ಶಿಲಾ ಮೂರ್ತಿಗಳ ಪ್ರತಿಷ್ಠಾಪನೆಯ 46ನೇ ವಾರ್ಷಿಕೋತ್ಸವ



ದಾವಣಗೆರೆಯ ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿ (ರಿ.ನಂ.7) ಯ ಭಜನಾ ಮಂಡಳಿ ವತಿಯಿಂದ ಮಹಾರಾಜ ಪೇಟೆಯ ಶ್ರೀ ವಿಟ್ಠಲ ಮಂದಿರದಲ್ಲಿ ಶ್ರೀ ವಿಠಲ ರುಖುಮಾಯಿ ಶಿಲಾ ಮೂರ್ತಿಗಳ ಪ್ರತಿಷ್ಠಾಪನೆಯ 46ನೇ ವಾರ್ಷಿಕೋತ್ಸವ ಕಾರ್ಯಕ್ರಮ ಆರಂಭವಾಗಿದೆ.

ಇದೇ ಸಂದರ್ಭದಲ್ಲಿ ಶಿವರಾತ್ರಿ ಮಹೋತ್ಸವ ಮತ್ತು ಶ್ರೀ ಗೀತ ಜ್ಞಾನೇಶ್ವರಿ ಗ್ರಂಥ ಪಾರಾಯಣ ಸಪ್ತಾಹ ಕೂಡಾ ಏರ್ಪಾಡಾಗಿದೆ ಎಂದು ದೈವ ಮಂಡಳಿ ಅಧ್ಯಕ್ಷ ಎಂ.ಎನ್. ರಘು ಮುಸಳೆ ತಿಳಿಸಿದ್ದಾರೆ. ಈ ಕಾರ್ಯಕ್ರಮ ಗಳು ಈಗಾಗಲೇ ಆರಂಭವಾಗಿದ್ದು, ನಾಡಿದ್ದು ದಿನಾಂಕ 9 ರವರೆಗೆ ಜರುಗಲಿದೆ.

ಪ್ರತಿದಿನ ಮುಂಜಾನೆ 5.30ಕ್ಕೆ ಕಾಕಡಾರತಿ, ಭಜನೆ, ಬೆಳಿಗ್ಗೆ 7ಕ್ಕೆ ಶ್ರೀ ಜ್ಞಾನೇಶ್ವರಿ ಸಾಮೂಹಿಕ ಪಾರಾಯಣ, ಬೆಳಿಗ್ಗೆ 9ಕ್ಕೆ ನಾಮಜಪ, ರಾತ್ರಿ 8.30ಕ್ಕೆ ದುರ್ಗಾ ಮಹಿಳಾ ಮಂಡಳಿಯಿಂದ ನೃತ್ಯ, ರಾತ್ರಿ 10ಕ್ಕೆ ಹ.ಭ.ಪ. ಮನು ಮಹಾರಾಜ್ ಶಿವೂರಕರ್ ಪಂಡರಾಪುರ ಇವರಿಂದ ಕೀರ್ತನೆ ಆಯೋಜನೆ ಗೊಂಡಿದೆ.

ಇಂದು ಶಿವರಾತ್ರಿಯ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ 5ಕ್ಕೆ ರುಖುಮಾಯಿ ಮಹಿಳಾ ಮಂಡಳಿಯಿಂದ ಭಜನೆ, ಸಂಜೆ 6ಕ್ಕೆ ಕಲಾವತಿ ಮಹಿಳಾ ಮಂಡಳಿಯಿಂದ ಶಿವನಾಮ ಸ್ತೋತ್ರ, ರಾತ್ರಿ 8ಕ್ಕೆ ತರುಣಾ ಮಂಡಳ ಯೋಗ ಕೇಂದ್ರದಿಂದ ಮಕ್ಕಳ ಮನೋರಂಜನೆಯ ಕಾರ್ಯಕ್ರಮಗಳು ಜರುಗಲಿವೆ.

ನಾಳೆ ಶನಿವಾರ ಬೆಳಿಗ್ಗೆ 8ಕ್ಕೆ ಜ್ಞಾನೇಶ್ವರಿ ಪಾರಾಯಣ ಮುಕ್ತಾಯ ಸಮಾರಂಭ, ಬೆಳಿಗ್ಗೆ 9.30ಕ್ಕೆ ಶ್ರೀ ವಿಠಲ ರುಕ್ಮಾಯಿ ದೇವರ ರಥೋತ್ಸವ, ಮಹಿಳಾ ಮಂಡಳಿಯಿಂದ ಕುಂಭಾಭಿಷೇಕ, ಭಜನೆಯೊಂದಿಗೆ ರಾಜಬೀದಿಗಳಲ್ಲಿ ಉತ್ಸವ ನಡೆಯಲಿದೆ.

ಮಧ್ಯಾಹ್ನ 1ಕ್ಕೆ ಶ್ರೀ ಸಂತ ಪೂಜೆ, ಮಧ್ಯಾಹ್ನ 1.15ಕ್ಕೆ ವಿಶೇಷ ಪಾವುಲ ಭಜನೆ, ಮಧ್ಯಾಹ್ನ 2ಕ್ಕೆ ಶ್ರೀ ಸಂತ ಸಮಾರಾಧನೆಯೊಂದಿಗೆ ಕಾರ್ಯಕ್ರಮ ಸಮಾರೋಪಗೊಳ್ಳಲಿದೆ.

## ರಾಮಲಿಂಗೇಶ್ವರ ಮಹಾಸ್ವಾಮಿಗಳ ಮುಳ್ಳುಗದ್ದುಗೆ, ಅಡ್ಡ ಪಲ್ಲಕ್ಕಿ ಉತ್ಸವ

ಚನ್ನಗಿರಿ ತಾಲ್ಲೂಕಿನ ತ್ಯಾವಣಿಗೆ ಸಮೀಪದ ಹರನಹಳ್ಳಿ - ಕೆಂಗಾಪುರ ಶ್ರೀ ರಾಮಲಿಂಗೇಶ್ವರ ಮಠದಲ್ಲಿ ಇಂದಿನಿಂದ ಇದೇ ದಿನಾಂಕ 10 ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಇಂದು ಬೆಳಗ್ಗೆ 8 ಗಂಟೆಗೆ ಬ್ರಹ್ಮ ಮಾಲೆ ಗುರು ದೀಕ್ಷೆ, ಸಂಜೆ 5 ಗಂಟೆಗೆ ನಾಗ ಗುಗ್ಗಳ ಕಾರ್ಯಕ್ರಮ, ಅಥಣಿ ತಾಲ್ಲೂಕಿನ ಶ್ರೀ ರಾಮಲಿಂಗೇಶ್ವರ ಕಲಾ ತಂಡದಿಂದ ಸಂಗೀತ ಕಾರ್ಯಕ್ರಮ ಹಾಗೂ ಶ್ರೀ ರಾಮಲಿಂಗೇಶ್ವರ ವಿದ್ಯಾ ಸಂಸ್ಥೆಯ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ನಾಳೆ ಶನಿವಾರ ಬೆಳಿಗ್ಗೆ 6 ಗಂಟೆಗೆ ಶ್ರೀ ಸಮರ್ಥ ಸದ್ಗುರು ಶ್ರೀ ರಾಮಲಿಂಗೇಶ್ವರ ಮಹಾಸ್ವಾಮಿಗಳ 48 ನೇ ವರ್ಷದ ಮುಳ್ಳು ಗದ್ದಿಗೆ ಉತ್ಸವ, ಉಚಿತ ಸಾಮೂಹಿಕ ವಿವಾಹ, ಜವಳ, ಸಂಜೆ 7 ಗಂಟೆಗೆ ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ ನೆರವೇರಲಿವೆ. ಅಂದಿನ ಕಾರ್ಯಕ್ರಮವನ್ನು ಮಾಜಿ ಲೋಕಸಭಾ ಸದಸ್ಯ ವಿ. ಎಸ್. ಉಗ್ರಪ್ಪ ಉದ್ಘಾಟಿಸುವರು.

ದಿನಾಂಕ 10 ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ಶ್ರೀಗಳ ಆಶೀರ್ವಚನ, 9 ಗಂಟೆಗೆ ಅಮಾವಾಸ್ಯೆ ಪ್ರಯುಕ್ತ ಅಗ್ನಿಹೋಮ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9606297544 ಅಥವಾ 9845409510.

# ಸಾಮಾಜಿಕ ಪರಿವರ್ತನೆಗೆ ಸಾಮೂಹಿಕ ವಿವಾಹ ಅಗತ್ಯ

### ಹರಪನಹಳ್ಳಿ ತಾಲ್ಲೂಕಿನ ನೀಲಗುಂದ ಗ್ರಾಮದ ಕಾರ್ಯಕ್ರಮದಲ್ಲಿ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿಗಳು



ಹರಪನಹಳ್ಳಿ. ಮಾ.7- ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳು ಸೌಹಾರ್ದ ಕೇಂದ್ರಗಳಾಗಿ ಪರಿವರ್ತನೆ ಆಗಬೇಕಾದರೆ ಸಾಮೂಹಿಕ ವಿವಾಹ ದಂತಹ ಸಮಾಜಮುಖಿ ಕಾರ್ಯಕ್ರಮಗಳು ಹೆಚ್ಚೆಚ್ಚು ಆಗಬೇಕು ಎಂದು ನೀಲಗುಂದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿಗಳು ಹೇಳಿದರು.

ತಾಲ್ಲೂಕಿನ ನೀಲಗುಂದ ಗುಡ್ಡದ ವಿರಕ್ತ ಮಠದಲ್ಲಿ ಜರುಗಿದ ಆದರ್ಶ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಧಾರ್ಮಿಕ, ಅಧ್ಯಾತ್ಮಿಕ, ಐತಿಹಾಸಿಕ ಮತ್ತು ಪೌರಾಣಿಕವು ಚತುರ್ವಿಧ ಫಲದಂತೆ ಬರಗಾಲದಲ್ಲೂ ಕಂಗೊಳಿಸುವಂತಹ ಬಯಲು ಸೀಮೆಯ ನೀಲಗುಂದ ಗ್ರಾಮದ ವೈಶಿಷ್ಟ್ಯವೇ ಬೇರೆಯಾಗಿದೆ ಎಂದರು

ಕಳೆದ 37 ವರ್ಷಗಳ ಹಿಂದೆ ಪಾಳು ಬಿದ್ದ ಮಠದಲ್ಲಿ ಧರ್ಮಶಾಲೆ, ಅನಾಥ ಮಕ್ಕಳಿಗೆ ಆಶ್ರಯ, ಶಿಕ್ಷಣ ಸಂಸ್ಥೆ, ಪ್ರಸಾದ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮ ಮಾಡುವುದಕ್ಕೆ ಭಕ್ತರ ಸ್ಪಂದನೆ ಮುಖ್ಯವಾಗಿದೆ ಎಂದು ಹೇಳಿದರು.

ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮಾತನಾಡಿ, ಸಾಮೂಹಿಕ ವಿವಾಹಗಳಿಂದ ಸಮಾಜದಲ್ಲಿ ಶಾಂತಿ -ನೆಮ್ಮದಿಯ ಬದುಕು ಕಂಡುಕೊಳ್ಳಬಹುದು. ಜತೆಗೆ ಪರಸ್ಪರ ಪ್ರೀತಿ, ವಿಶ್ವಾಸ ವೃದ್ಧಿಸಿಕೊಳ್ಳಬಹುದು ಎಂದರು.

ಮನುಷ್ಯ ಜೀವನದಲ್ಲಿ ಸರಳತೆ ಪಾಲಿಸಿದಾಗ ಸುಖ, ಶಾಂತಿ, ನೆಮ್ಮದಿ ಕಾಣಲು ಸಾಧ್ಯ ಎಂದ ಅವರು, ವಿವಾಹ ಬಂಧನಕ್ಕೊಳಗಾದ ನವ ಜೋಡಿಗಳು, ಹಾಲು ಜೇನಿನಂತೆ ಜೀವನ ನಡೆಸಿ ಎಂದು ಶುಭಾಶಯ ಕೋರಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ಅದ್ದೂರಿ ಮದುವೆಗೆ ಹಣ ವ್ಯಯಿಸುವ ಬದಲು, ಸಾಮೂಹಿಕ ಮದುವೆ ಆಗುವ ಮೂಲಕ ಆರ್ಥಿಕ ಹೊರೆ ಕಡಿಮೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ದುಬಾರಿ ದಿನಮಾನಗಳಲ್ಲಿ ಸರಳವಾಗಿ ವಿವಾಹ ಜರುಗುವುದರಿಂದ ಜನ ಸಾಮಾನ್ಯರ ಖರ್ಚು-ವೆಚ್ಚ ಕಡಿಮೆಯಾಗುತ್ತದೆ. ಕಾಂಗ್ರೆಸ್ ಸರ್ಕಾರ ಪ್ರತಿ ಜೋಡಿಗೆ 50 ಸಾವಿರ ರೂ. ಪ್ರೋತ್ಸಾಹ ಧನ ನೀಡುತ್ತಿದ್ದು, ಸದುಪಯೋಗ ಪಡಿಸಿಕೊಳ್ಳಿ ಎಂದು ಹೇಳಿದರು.

ಕುಕನೂರಿನ ಅನ್ನದಾನೇಶ್ವರ ಶಾಖಾಮಠದ ಮಹಾದೇವ ಶ್ರೀಗಳು, ಶರಣ ಬಸವ ಬುದ್ಧ ಭೀಮಜೀ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಗುಂಡಗತ್ತಿ ಕೊಟ್ರಪ್ಪ ಮಾತನಾಡಿದರು.

ಲಿಂಗನಾಯ್ಕನಹಳ್ಳಿ ಜಂಗಮ ಕ್ಷೇತ್ರದ ಚನ್ನವೀರ ಶಿವಯೋಗಿ ಶ್ರೀಗಳು, ಹಿರೇಮಲ್ಲನಕೇರಿಯ ಚನ್ನಬಸವ ಶ್ರೀಗಳು, ಅಭಿನವ ಚನ್ನಬಸವ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಬುಡ್ಗ ಜಂಗಮ ಅಲೆಮಾರಿ ಜಿಲ್ಲಾ ಘಟಕದ ಅಧ್ಯಕ್ಷ ವಿ. ಸಣ್ಣ ಅಜ್ಜಯ್ಯ, ಮುಖಂಡರಾದ ಬಿ.ವೈ. ಹರೀಶ್, ತೆಲಗಿಯ ಕೆ. ಯೋಗೇಶ್, ದುಗ್ಗಾವತಿ ಮಂಜುನಾಥ, ದೇವರ ತಿಮ್ಮಲಾಪುರದ ನಾಗರಾಜ, ಮಲ್ಲೇಶಪ್ಪ, ಎಲಿ ವೃಷಭೇಂದ್ರಪ್ಪ, ವೀರಯ್ಯ ಇತರರು ಇದ್ದರು.

## ಶಂಭುಲಿಂಗೇಶ್ವರ ದೇಗುಲದಲ್ಲಿ ಇಂದು ರುದ್ರಾಭಿಷೇಕ, ಪಂಚಾಮೃತಾಭಿಷೇಕ

ದಾವಣಗೆರೆ ವಿನೋಬನಗರ ಮೊದಲನೇ ಮುಖ್ಯರಸ್ತೆ, ಎರಡನೇ ಅಡ್ಡರಸ್ತೆಯಲ್ಲಿರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಬೆಳಗಿನ ಜಾವ 4.30 ರಿಂದ ಶಂಭುಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ ಜರುಗಲಿವೆ. ಸಂಜೆ 4.30 ರಿಂದ ತಡರಾತ್ರಿಯವರೆಗೆ ಶ್ರೀ ಸ್ವಾಮಿಯ ದಿವ್ಯ ದರ್ಶನವಿರುತ್ತದೆ ಎಂದು ದೇವಸ್ಥಾನದ ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ಬಿ. ಮಂಜುನಾಥ್ ತಿಳಿಸಿದ್ದಾರೆ.

## ಗೃಹ ಬಂಧನಕ್ಕಾಗಿ 1.64 ಕೋಟಿ ರೂ. ಕೇಳಿದ ಎನ್.ಐ.ಎ.

ನವದೆಹಲಿ, ಮಾ. 7 - ಎಲ್ಗಾರ್ ಪರಿಷತ್ - ಮಾವೋ ಸಂಪರ್ಕ ಪ್ರಕರಣದಲ್ಲಿ ಬಂಧಿತ ಗೌತಮ್ ನವಲಖಾ, ಗೃಹ ಬಂಧನ ಪಡೆದಿರುವುದಕ್ಕಾಗಿ 1.64 ಕೋಟಿ ರೂ.ಗಳನ್ನು ಪಾವತಿಸಬೇಕು ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ.

ಎನ್.ಐ.ಎ. ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು, ಆರೋಪಿ ನವಲಖಾ ಇದುವರೆಗೆ 10 ಲಕ್ಷ ರೂ. ಮಾತ್ರ ಪಾವತಿಸಿದ್ದು, ನಿರಂತರ ಭದ್ರತೆಗೆ ಆಗಿರುವ ಉಳಿದ ವೆಚ್ಚ ಪಾವತಿಸಬೇಕಿದೆ ಎಂದು ಹೇಳಿದರು. ನವಲಖಾ ಪರವಾಗಿ ಹಾಜರಿದ್ದ ಹಿರಿಯ ವಕೀಲೆ ನಿತ್ಯಾ ರಾಮಕೃಷ್ಣನ್, 1.64 ಕೋಟಿ ರೂ.ಗಳ ಹಣ ಕೇಳುತ್ತಿರುವುದು ತಪ್ಪು ಹಾಗೂ ಇದು ನಿಯಮಗಳಿಗೆ ವಿರುದ್ಧವಾಗಿದೆ ಎಂದರು.

ನಾಗರಿಕರನ್ನು ಕಸ್ಟಡಿಯಲ್ಲಿ ಇಟ್ಟುಕೊಂಡಿದ್ದಕ್ಕೆ ಕೋಟಿ ರೂ.ಗಳನ್ನು ಕೇಳಲಾಗದು. ಎನ್.ಐ.ಎ. ಬೇಡಿಕೆಯನ್ನು ವಿರೋಧಿಸುತ್ತೇವೆ. ಈ ಬಗ್ಗೆ ವಿಚಾರಣೆ ನಡೆಸಬೇಕು. ಇದು ಹಣ ವಸೂಲಿಯಂತೆ ಎಂದರು.

ಹಣ ವಸೂಲಿ ಎಂಬ ಪದಕ್ಕೆ ತೀವ್ರವಾಗಿ ಆಕ್ಷೇಪಿಸಿದ ರಾಜು, ನಾಗರಿಕರು ಗೃಹ ಬಂಧನವನ್ನು ಹಕ್ಕಾಗಿ ಕೇಳಲಾಗದು ಎಂದರು.


ಈ ಕುರಿತು ವಿವರವಾದ ವಿಚಾರಣೆಯ ಅಗತ್ಯವಿದೆ ಎಂದು ಹೇಳಿದ ಸುಪ್ರೀಂ ಕೋರ್ಟ್, ಏಪ್ರಿಲ್ ತಿಂಗಳಲ್ಲಿ ವಿಚಾರಣೆ ನಡೆಸುವುದಾಗಿ ಹೇಳಿದೆ.

# ಪ್ರತಿ ಹೆಜ್ಜೆಯೂ ಮಹಿಳೆಯರಿಗೆ ಹೋರಾಟದ ಹೆಜ್ಜೆಗಳೇ

ಎಲ್ಲಿನಾರಿಯರನ್ನುಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. ಇದು ನಮ್ಮ ಸಂಸ್ಕೃತಿಯಲ್ಲಿ ಮಹಿಳೆಯರಿಗಿರುವ ಪವಿತ್ರ ಸ್ಥಾನ. ಹೆಣ್ಣಿಲ್ಲದ ಮನೆಯಲ್ಲಿ ಬಾಂಧವ್ಯಕ್ಕೆ ಮೆರಗಿಲ್ಲ. ಪ್ರೀತಿ, ವಾತ್ಸಲ್ಯ, ಮಮತೆ, ಕರುಣೆ, ತಾಳ್ಮೆ, ಸಹನೆಗಳಿಗೆ ಅರ್ಥವಿಲ್ಲ. ಕುಟುಂಬವನ್ನು ಸಂಭಾಳಿಸುತ್ತಾ ಸಂಬಂಧಗಳನ್ನು ಜೋಪಾನ ಮಾಡಿ ಬಾಂಧವ್ಯದ ಎಳೆಗಳನ್ನು ಬೆಸೆಯುತ್ತಾ ಹುಚ್ಚೋಟದ ಜೀವನಕ್ಕೆ ಕಡಿವಾಣ ಹಾಕಿ, ಸಂಸಾರದ ರಥವನ್ನು ಸುಗಮವಾಗಿ ಸಾಗಿಸುವ ಸಾರಥಿ. ಅಂತೆಯೇ ಮಹಿಳೆಯನ್ನು ಸಂಸ್ಕೃತಿಯ ರಕ್ಷಕಿ, ಪೋಷಕಿ ಮತ್ತು ವಾಹಕಿ ಎನ್ನಲಾಗುತ್ತದೆ. ಆದ್ದರಿಂದಲೇ ರೋಸೋ ಮತ್ತು ಮಹಾತ್ಮಾ ಗಾಂಧೀಜಿಯವರು ಮಹಿಳೆ ನಾಡಿನ ಅರ್ಥಶಕ್ತಿ ಎಂದಿದ್ದಾರೆ. ಪುರುಷರಿಗೆ ಹೊರ ನೋಟವಿದ್ದರೆ, ಮಹಿಳೆಯರಿಗೆ ಒಳನೋಟವಿರುತ್ತದೆ ಎಂದು ವಿಕ್ಟರ್ ಹ್ಯೂಗೋ ನುಡಿದಿದ್ದಾರೆ. ದೇವರು ಎಲ್ಲಾ ಕಡೆ ಇರಲಾರನು. ಆದ್ದರಿಂದ ಅವನು ತಾಯಿಯನ್ನು ಸೃಷ್ಟಿಸಿದ ಎಂಬ ಗಾದೆ ಮಾತು ಇದೆ. ಸಂಚಿಯ ಹೊನ್ನಮ್ಮನವರು ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವು, ಹೆಣ್ಣಿನಿಂದಲೇ ಸಕಲ ಸಂಪದವು ಎಂದಿದ್ದಾರೆ. ಹೀಗೆ ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಶಿಕ್ಷಕಿಯಾಗಿ, ಅಕ್ಕ-ತಂಗಿಯಾಗಿ, ಗೆಳತಿಯಾಗಿ ಸಕಲ ಸರ್ವಸ್ವಗಳನ್ನು ನೀಡುವ ಭೂಮಾತೆಯಾಗಿ ಇವಳ ಪಾತ್ರ ಅನನ್ಯ. ಇದರಿಂದಾಗಿ ಮನುಕುಲದ ಮುನ್ನಡೆಗೆ ಪ್ರಕೃತಿ ಮತ್ತು ಮಹಿಳೆ ಅನಿವಾರ್ಯವೆಂದು ಹೇಳಬಹುದು.

ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ಶ್ರೇಷ್ಠ ಮೌಲ್ಯಗಳು ಮಹಿಳೆಯನ್ನು ಗೌಣಗೊಳಿಸಿದ್ದ, ಆಕೆಯನ್ನು ಅಬಲೆಯೆಂದು ನಂಬಿಸಿ, ಅವಳನ್ನು ಅಧೀನಳನ್ನಾಗಿಸಿದ್ದು, ಸಂತುಷ್ಟ ಗೃಹಿಣಿಯೇ ಮನೆಯ ಲಕ್ಷ್ಮಿ ಎಂದು ನಂಬಿಸಿ, ತಾಯ್ತನ ಅತ್ಯಂತ ಶ್ರೇಷ್ಟ ಪದವಿ ಎಂದು ತಿಳಿಸಿ, ಮಾತೃದೇವೋಭವ ಎಂದು ದೈವತ್ವಕ್ಕೇರಿಸಲಾಯಿತು. ಜೊತೆಗೆ ಬಾಹ್ಯ ಸಂಪರ್ಕ ಮಾಡುವುದು ಮತ್ತು ಹೊರಗಡೆ ಕೆಲಸ ಮಾಡುವುದು ಅನುಪಯುಕ್ತ ಎಂಬ ಭಾವನೆಯನ್ನು ಬೆಳೆಸಿದ್ದು ಈ ನೆಲದ ಇತಿಹಾಸ. ಮಹಿಳೆಯ ಸ್ವಾತಂತ್ರ್ಯಕ್ಕೆ ಮತ್ತು ಬಂಧನಗಳ ವಿಮೋಚನೆಗೆ ಬೆಲೆ ನೀಡದೇ ಸ್ತ್ರೀ ಶಕ್ತಿಯನ್ನು ದೈವತ್ವಕ್ಕೇರಿಸಿ ಆರಾಧಿಸುವುದು ನಮ್ಮ ಆಷಾಢಭೂತಿತನವಲ್ಲವೇ ?

ಮಾರ್ಚ್ 8 ರಂದು ವಿಶ್ವದಾದ್ಯಂತ ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ, ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಯನ್ನು ಸ್ಮರಿಸಲು ಮತ್ತು ಸಮಾನತೆಯ ಹಕ್ಕುಗಳನ್ನು ಪ್ರತಿಪಾದಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಬದುಕಿನ ಪ್ರತಿಯೊಂದು ಹೆಜ್ಜೆಯೂ ಮಹಿಳೆಗೆ ಹೋರಾಟದ ಹೆಜ್ಜೆಗಳೇ ಅನ್ನುವಂತೆ ಅಮೆರಿಕಾದಲ್ಲಿ ಸಂಘಟಿತ ಹೋರಾಟದ ಮೊದಲ ಹೆಜ್ಜೆ ಪ್ರಾರಂಭವಾಯಿತು. ನ್ಯೂಯಾರ್ಕ್ ನ ಸಿದ್ಧ ಉಡುಪಿನ ಉದ್ಯಮದಲ್ಲಿ ವೇತನ ತಾರತಮ್ಯದ ವಿರುದ್ಧ ಹೋರಾಟಗೊಂಡು 1908ರಲ್ಲಿ ಇದೇ ಮಹಿಳೆಯರು ಅಸಮಾನತೆಯ ವಿರುದ್ಧ ಪ್ರತಿಭಟಿಸಿ ರಕ್ತ ಚೆಲ್ಲಿದರು. ಅಮೆರಿಕಾದಲ್ಲಿ 1909 ಫೆಬ್ರವರಿ 28ರಂದು ಮೊದಲ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು. ಮಹಿಳೆಯ ತ್ಯಾಗ, ಬಲಿದಾನ ಹಾಗೂ ಸಂಘಟಿತ ಹೋರಾಟದ ನೆನಪನ್ನು ಸ್ಮರಣೀಯವಾಗಿಸಲು ಮತ್ತು ಮಹಿಳೆಯರಿಗೆ ಸಾರ್ವತ್ರಿಕ ಮತದಾನದ ಹಕ್ಕನ್ನು ಬೇಡಿಕೆಯನ್ನಾಗಿಟ್ಟುಕೊಂಡು 1910ರಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಅಧಿವೇಶನದಲ್ಲಿ ಕಮ್ಯುನಿಸ್ಟ್ ನಾಯಕಿ ಕ್ಲಾರುಜೆಟ್ ಕಿನ್‌ರ ಮಾರ್ಚ್ 8ನ್ನು ಅಂತರರಾಷ್ಟ್ರೀಯ ಮಹಿಳಾ ದಿನವೆಂದು ಘೋಷಿಸಿದರು. 1945ರಲ್ಲಿ ವಿಶ್ವ ಸಂಸ್ಥೆಯಲ್ಲಿ ಪುರುಷರು ಮತ್ತು ಮಹಿಳೆಯರ ನಡುವಿನ ಸಮಾನತೆ ತತ್ವವನ್ನು ದೃಢೀಕರಿಸುವ ಮೊದಲು ಅಂತರರಾಷ್ಟ್ರೀಯ ಒಪ್ಪಂದವನ್ನು ಅಂಗೀಕರಿಸಲಾಯಿತು. ನಂತರ 1975 ಮಾರ್ಚ್ 8ರಂದು ವಿಶ್ವ ಸಂಸ್ಥೆಯು ಅಧಿಕೃತವಾಗಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿತು. ಅಂದಿನಿಂದ ಪ್ರತಿವರ್ಷ ಮಾರ್ಚ್ 8ರಂದು ವಿಶ್ವದಾದ್ಯಂತ ಮಹಿಳೆಯರಿಗೆ ಸಮಾನ ಸ್ಥಾನ-ಮಾನ, ಮಹಿಳಾ ಸಬಲೀಕರಣದ ಮಹತ್ವ, ಲಿಂಗ ಪಕ್ಷಪಾತ ನಿವಾರಣೆ, ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಕೊಡುಗೆಗಳನ್ನು ಸ್ಮರಿಸಲು, ಮಹಿಳೆಯರ



**ಇಂದು ವಿಶ್ವ ಮಹಿಳಾ ದಿನಾಚರಣೆ**

ಮೇಲಿನ ದೌರ್ಜನ್ಯ ತಡೆಯಲು, ಜಾಗೃತಿ ಮೂಡಿಸಲು ಅನೇಕ ಕಾರ್ಯಕ್ರಮಗಳು ಮತ್ತು ಅಭಿಯಾನಗಳನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ.

1996ರಿಂದ ವಿಶ್ವಸಂಸ್ಥೆ ಪ್ರತಿವರ್ಷ ಅಂತರರಾಷ್ಟ್ರೀಯ ಮಹಿಳಾ ದಿನಕ್ಕೆ ಒಂದು ಘೋಷ ವಾಕ್ಯ ನೀಡುತ್ತದೆ. 'ಪ್ರಗತಿಯ ವೇಗ ವರ್ಧನೆಗೆ ಮಹಿಳೆಯ ಮೇಲೆ ಹೂಡಿಕೆ' ಎಂಬುದು 2024ರ ಘೋಷವಾಕ್ಯವಾಗಿದೆ. ಹಾಗೆಯೇ inspire inclusion ಎಂಬುದು ಅಂತರರಾಷ್ಟ್ರೀಯ ಮಹಿಳಾ ದಿನದ ಅಭಿಯಾನದ ಘೋಷವಾಕ್ಯವಾಗಿದೆ. ಪ್ರತಿಯೊಂದರಲ್ಲಿಯೂ ಮಹಿಳೆಯ ಒಳಗೊಳ್ಳುವಿಕೆ ಮತ್ತು ಗೌರವಿಸುವುದಾಗಿದೆ.

ಮಹಿಳೆಯರಿಗೆ ಸಮಾನತೆ ಎಂಬ ಪರಿಕಲ್ಪನೆ ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಪ್ರಸಿದ್ಧ ವಚನಗಾರ್ತಿ ಹಾಗೂ ಮಹಿಳಾ ಪ್ರಥಮ ಹೋರಾಟಗಾರ್ತಿ ಅಕ್ಕಮಹಾದೇವಿಯವರು ತಮ್ಮ ವಚನ ಸಾಹಿತ್ಯದ ಮೂಲಕ ಪ್ರತಿಭಟನೆಯ ಕಿಚ್ಚು ಹರಡಿ, ಮಹಿಳೆಯರಲ್ಲಿ ಸ್ವಾಭಿಮಾನ ಮತ್ತು ಆತ್ಮ ಗೌರವವನ್ನು ತರುವುದರ ಮೂಲಕ ಹೋರಾಟಗಳಿಗೆ ಪ್ರೇರಣೆಯಾದರು. ಸಾವಿತ್ರಿಬಾಯಿ ಜ್ಯೋತಿರಾವ್ ಫುಲೆ 1948ರಲ್ಲಿ ಮೊದಲ ಮಹಿಳಾ ಶಾಲೆಯನ್ನು ಪುಣೆಯ ಭಿಡೆವಾಡಿಯಲ್ಲಿ ಸ್ಥಾಪಿಸಿದರು. ಪಶ್ಚಿಮ ಬಂಗಾಳದ ಈಶ್ವರ ಚಂದ್ರ ವಿದ್ಯಾಸಾಗರ್‌ರವರು ಸ್ತ್ರೀ ಶಿಕ್ಷಣ ಮತ್ತು ವಿಧವಾ ವಿವಾಹದ ವಿಚಾರಗಳನ್ನು ಮಂಡಿಸಿ ಒಂದೇ ವರ್ಷದಲ್ಲಿ 35 ಬಾಲಕಿಯರ ಶಿಕ್ಷಣ ಸಂಸ್ಥೆಗಳನ್ನು ತೆರೆದರು. ನಂತರ ಬ್ರಿಟಿಷ್ ಸರ್ಕಾರಕ್ಕೆ ಒತ್ತಡ ತಂದು 1856ರಲ್ಲಿ ಬ್ರಿಟೀಷ್ ಸರ್ಕಾರ ವಿಧವಾ ವಿವಾಹ ಕಾಯ್ದೆಯನ್ನು ಜಾರಿಗೆ ತಂದರು. ಇದೇ ಸಂದರ್ಭದಲ್ಲಿ ರಾಜಾರಾಮ್ ಮೋಹನ್ ರಾಯ್ ಸತಿ ಸಹಗಮನ ಪದ್ಧತಿ ವಿರುದ್ಧ ಹೋರಾಡಿ ತಡೆಯುವಲ್ಲಿ ಯಶಸ್ವಿಯಾದರು. ಕರ್ನಾಟಕದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಕೊಡುಗೆ ನೀಡುವಲ್ಲಿ ಲಂಡನ್ ಮಿಷನ್ ಸ್ಕೂಲ್ 1833ರಲ್ಲಿ ಬಳ್ಳಾರಿಯಲ್ಲಿ, 1835ರಲ್ಲಿ ಬೆಳಗಾವಿಯಲ್ಲಿ, 1840ರಲ್ಲಿ ಬೆಂಗಳೂರಿನಲ್ಲಿ ಹೆಣ್ಣು ಮಕ್ಕಳ ಶಾಲೆಗಳನ್ನು ತೆರೆದು ಶಿಕ್ಷಣಕ್ಕೆ ಅವಕಾಶ ಕಲ್ಪಿಸಿತು. ಮೈಸೂರು ಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಸ್ತ್ರೀ ಶಿಕ್ಷಣವು ಮಹತ್ವ ಪಡೆಯಿತು.

ಭಾರತದಲ್ಲಿ ಮೊಟ್ಟ ಮೊದಲಿಗೆ ಚಂದ್ರಮುಖಿ ಬಸು ಮತ್ತು ಕಾದಂಬಿನಿ ಗಂಗೂಲಿ ಕೊಲ್ಕತ್ತಾ ವಿವಿಯಿಂದ 1883ರಲ್ಲಿ ಪದವಿ ಪಡೆದ ಮಹಿಳೆಯರು, ನಂತರ ಸಮಾಜ ಸುಧಾರಕ ದೋಂಡೋ ಕೇಶವ ಕರ್ವೆ 1916ರಲ್ಲಿ ಮುಂಬೈನ SNDT ಮಹಿಳಾ ವಿಶ್ವ ವಿದ್ಯಾಲಯ ಸ್ಥಾಪಿಸಿದರು. ಸ್ವತಂತ್ರ್ಯ ಭಾರತದ ಮೊದಲ ಮಹಿಳಾ ಐಎಎಸ್ ಅಧಿಕಾರಿ ಇಶಾ ಬಸಂತ್ ಜೋಶಿ ಮಹಿಳೆಯರಿಗೆ ಸ್ಫೂರ್ತಿಯ ಸೆಲೆಯಾದರು.

ಮಹಿಳೆ ಇತ್ತೀಚೆಗೆ ತನ್ನ ಕರ್ತೃತ್ವ ಶಕ್ತಿಯಿಂದಾಗಿ ಎಲ್ಲಾ ರಂಗಗಳಲ್ಲಿ ಮುನ್ನುಗ್ಗುತ್ತಿದ್ದಾಳೆ. ಮೌಢ್ಯಗಳನ್ನು ಕಳಚಿ ಕೊಳ್ಳುತ್ತಾ, ಬಾಹ್ಯಾಕಾಶ ಸಂಶೋಧನೆ, ಚಂದ್ರಯಾನದಲ್ಲಿಯ ಮಹಿಳಾ ವಿಜ್ಞಾನಿಗಳು ಲಗ್ಗೆ ಹಾಕುತ್ತಾ ಸಾಧನೆಗೈಯ್ಯುತ್ತಿರುವಾಗ, ಪುರುಷ ಮಾತ್ರ ತಾನು ಕಟ್ಟಿದ ಕೋಟೆಗಳನ್ನು ಒಂದೊಂದಾಗಿ ಕಳಚಿಕೊಳ್ಳುತ್ತಾ, ದುರ್ಬಲನಾಗುತ್ತಿದ್ದಾನೆ. ಮಹಿಳೆ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಪ್ರಬಲಳಾಗಿದ್ದರೂ ಅವಳ ಮೇಲಿನ ಶೋಷಣೆಗಳು ನಿಂತಿಲ್ಲ. ವಿಪರ್ಯಾಸವೆಂದರೆ ವಿದ್ಯಾವಂತ ಮಹಿಳೆಯರು ಸಾಕಷ್ಟು ಹೋರಾಟ ನಡೆಸಿ ದೌರ್ಜನ್ಯಗಳನ್ನು ಅನುಭವಿಸುತ್ತಿದ್ದರೆ, ಅವಿದ್ಯಾವಂತ ಮಹಿಳೆಯರು ಏನೂ ಪ್ರತಿರೋಧ ತೋರದೇ ಹಿಂಸೆಗಳನ್ನು ಅನುಭವಿಸುತ್ತಾ ಇದು ನಮ್ಮ ಕರ್ಮವೆಂದು ಬದುಕುತ್ತಿದ್ದಾರೆ.


ಎನ್‌ಸಿಆರ್‌ಬಿ ವರದಿಯ ಪ್ರಕಾರ ಇತ್ತೀಚೆಗೆ ದಾಖಲಾದ ಮಹಿಳಾ ದೌರ್ಜನ್ಯದ ಸಂಖ್ಯೆ 4,45,236. ದೇಶದಲ್ಲಿ ಸರಾಸರಿ ಪ್ರತಿ ಗಂಟೆಗೆ 51 ಮಹಿಳೆಯರ ಮೇಲೆ ದೌರ್ಜನ್ಯಗಳು. ಇದರಿಂದ ಸಮಸ್ಯೆಗಳ ಗಂಭೀರತೆ ಉಂಟಾಗಿದೆ.

ಮಹಿಳೆಗೆ ಇಂದು ಸಮಾಜದಲ್ಲಿ ಸುರಕ್ಷತೆಯೇ ಇಲ್ಲವಾಗಿದೆ. ಮನೆಯಿಂದ ಹೊರ ನಡೆದರೆ ನಾನಾ ಭಯಗಳು ಕಾಡುತ್ತವೆ. ಬಲತ್ಕಾರದ ಭಯ, ಅಪಹರಣ, ಮುಖದ ಮೇಲೆ ಆಸಿಡ್ ಎರಚುವ, ಅತ್ಯಾಚಾರ, ಹೆಣ್ಣು ಮಕ್ಕಳ ಮಾರಾಟ, ಜಾಗತೀಕರಣದ ಹೆಸರಿನಲ್ಲಿ ಮಹಿಳೆಯರನ್ನು ಪ್ರಚಾರದ ವಸ್ತುವನ್ನಾಗಿ ಬಳಸಲಾಗುತ್ತದೆ. ಸೌಂದರ್ಯ ಸ್ಪರ್ಧೆ, ಮಾಡೆಲಿಂಗ್ ಫ್ಯಾಷನ್ ಶೋಗಳ ಹೆಸರಿನಲ್ಲಿ ಅರೆಬೆತ್ತಲೆಗೊಳಿಸಲಾಗುತ್ತದೆ. ಅನೇಕ ಅಂತರ್ಜಾಲ ತಾಣಗಳು, ಸಾಮಾಜಿಕ ತಾಣಗಳು ಮಹಿಳೆಯ ಮೇಲೆ ಹಿಂಸೆಯನ್ನು ಪ್ರಚೋದಿಸುವ ತಾಣಗಳಾಗಿರುವುದು ಸಮಸ್ಯೆಯ ಸಂಕೀರ್ಣತೆಯನ್ನು ಹೆಚ್ಚಿಸಿದೆ. ಕೌಟುಂಬಿಕ ಹಿಂಸೆ ನಿರೋಧ ಕಾಯ್ದೆ, ಸ್ತ್ರೀಯರಿಗೆ ಆಸ್ತಿಯ ಹಕ್ಕು, ರಾಜಕೀಯ ಮೀಸಲಾತಿ, ಆರ್ಥಿಕ ಸಬಲೀಕರಣ, ಹೆಣ್ಣು ಭ್ರೂಣ ಹತ್ಯೆ ಅಪರಾಧ ಕಾಯ್ದೆಗಳು ಜಾರಿಯಲ್ಲಿದ್ದರೂ ಮಹಿಳೆಯರ ಸ್ಥಿತಿ ಚಿಂತಾಜನಕವಾಗಿದೆ. 'ಭೇಟಿ ಬಚಾವೋ ಭೇಟಿ ಪಡಾವೋ' ಇತ್ತೀಚಿನ ಒಂದು ಘೋಷಣೆ ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ಹೆಣ್ಣು ಮಕ್ಕಳನ್ನು ಉಳಿಸಿ ಎಂಬ ಪದ ತಲೆ ತಗ್ಗಿಸುವಂತದ್ದು.

ಬರೀ ಶಬ್ದಗಳಿಂದ ಸ್ತ್ರೀಯರನ್ನು ಗೌರವಿಸಿದರೆ, ಆರಾಧಿಸಿದರೆ ಪ್ರಯೋಜನವಿಲ್ಲ. ಪುರುಷನನ್ನು ಹಣ, ಅಧಿಕಾರದಿಂದ ಮಹಿಳೆಯನ್ನು ಮಾತ್ರ ಅವಳ ಚಾರಿತ್ರ್ಯದಿಂದ ಅಳೆಯುವುದು ಮತ್ತು ಹೆಣ್ಣನ್ನು ದಾನದ ವಸ್ತು ಎನ್ನುವ ಮನೋಭಾವ ಹಾಗೂ ಭೋಗದ ದೃಷ್ಟಿಯಿಂದ ಕಾಣುವ ವಿಕೃತಿ ನಿಲ್ಲಬೇಕು. ಹೆಣ್ಣು ಹೊರೆಯೂ ಅಲ್ಲ, ಗಂಡು ದೊರೆಯೂ ಅಲ್ಲ. ಅವಳನ್ನು ಅವಳ ಪಾಡಿಗೆ ಬದುಕಲು ಬಿಟ್ಟರೆ ತನ್ನ ಶಕ್ತಿ ಸಾಮರ್ಥ್ಯದಿಂದ ಪುರುಷರಂತೆ ಸಮಾನರಾಗಿ ಸಾಮಾಜಿಕ ಹಕ್ಕುಗಳನ್ನು ಪಡೆದು ಘನತೆ ಗೌರವದಿಂದ ಬಾಳಲು ಸಾಧ್ಯ.

**-ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ**
ದಾವಣಗೆರೆ.

# ಸ್ತ್ರೀ ಎಂದರೆ ಅಷ್ಟೇ ಸಾಕೇ... ನಿನಗೆ ಬೇರೆ ಹೆಸರು ಬೇಕೆ...?



ಹೆಣ್ಣೇ ನೀನೊಬ್ಬಳು ದಿಟ್ಟೆ,
ಗಟ್ಟಿಗಿತ್ತಿ. ನೋಡಲು ಅಷ್ಟೇ
ಮೆದು ಮತ್ತು ಮೃದು ಸ್ವಭಾವ.
ನಿನ್ನ ಮಾತುಗಳು ಇನ್ನೂ ಅತಿ
ಮಧುರ ಮತ್ತು ಸುಶ್ರಾವ್ಯ.
ಎಲ್ಲರಂತವಳಲ್ಲ ನೀನು , ನಿನ್ನ
ಗಾಂಭೀರ್ಯವೇ ನಿನಗೆ ಆಭರಣ.

ಹೆಣ್ಣು ವಿದ್ಯೆಗೆ ಸರಸ್ವತಿ,
ಸಂಪತ್ತಿಗೆ ಲಕ್ಷ್ಮಿ, ಶಕ್ತಿಗೆ ಪಾರ್ವತಿ,
ಮನೆಯ ಕಳಶ, ನಂದಾದೀಪ,
ಸಂಸಾರದ ಕಣ್ಣು ಎಲ್ಲಕ್ಕೂ
ಮಿಗಿಲಾಗಿ ಜನ್ಮದಾತೆ.

ತಾಳ್ಮೆ, ಸಂಯಮ, ಮೃದು ಸ್ವಭಾವದ ಪ್ರತೀಕ ಹೆಣ್ಣು ನಿಷ್ಕಲ್ಮಶ ಪ್ರೀತಿ ತೋರಿಸುವವಳು. ಹೆಣ್ಣು ಮಾತೃ ಹೃದಯಿಯಾಗಿದ್ದು, ಎಲ್ಲರನ್ನು ಸಮಚಿತ್ತದಿಂದ ಕಾಣುವಳು ಹೆಣ್ಣು.

ತಂದೆ-ತಾಯಿಗೆ ಮುದ್ದಿನ ಮಗಳಾಗಿ, ಗಂಡನಿಗೆ ಪ್ರೀತಿಯ ಮಡದಿಯಾಗಿ , ಮಕ್ಕಳಿಗೆ ವಾತ್ಸಲ್ಯಮಯಿ ತಾಯಿಯಾಗಿ, ಅತ್ತೆ ಮಾವನಿಗೆ ನೆಚ್ಚಿನ ಸೊಸೆಯಾಗಿ ಸಮಾಜದಲ್ಲಿ ಒಳ್ಳೆಯ ನಾರಿಯಾಗಿ, ಹೀಗೆ ಹತ್ತು ಹಲವು ಪಾತ್ರಗಳನ್ನು ಹೊರ ಮತ್ತು ಒಳಗೆ ನಿರ್ವಹಿಸುವಳು ಹೆಣ್ಣು. ಬಡತನ, ಸಿರಿತನ ಏನೇ ಬರಲಿ ಎಲ್ಲವನ್ನು ಬಂದಂತೆ ಸ್ವೀಕರಿಸುವಳು ಹೆಣ್ಣು.

ತಾನು ಉಪವಾಸವಿದ್ದರೂ ಮಕ್ಕಳು ಹಸಿವಿನಿಂದ ಇರಬಾರದೆಂದು ಉಣ ಬಡಿಸುವಳು ಹೆಣ್ಣು. ಅವರಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವುದರ ಜೊತೆಗೆ ಎಡವಿದಾಗ ತಿದ್ದಿ ತೀಡಿ ಸರಿ ದಾರಿಗೆ ತರುವಳು ಹೆಣ್ಣು, ಕುಟುಂಬ ಮತ್ತು ಸಮಾಜಕ್ಕೆ ತಾನು ಅಬಲೆಯಲ್ಲ, ಸಬಲೆ ಎಂದು ಧೈರ್ಯದಿಂದ ಸಾಧಿಸಿ ತೋರಿಸುವಳು ಹೆಣ್ಣು.

ಜೀವನದಲ್ಲಿ ಏನೇ ನೋವು, ಕಷ್ಟಗಳು ಬಂದರೂ ಪಾಲಿಗೆ ಬಂದದ್ದು ಪಂಚಾಮೃತ ಎಂದು ನಗು ನಗುತ್ತಾ ಸ್ವೀಕರಿಸುವಳು ಹೆಣ್ಣು. ಹೆಣ್ಣೇ ನೀ ಏನಾದರೂ ಸಾಧಿಸುವ ಮುನ್ನ ಎಲ್ಲರೂ ನಿನ್ನನ್ನು ಅಪಹಾಸ್ಯ ಮಾಡುವರು, ಅದೇ ನೀ ಸಾಧಿಸಿದ ಮೇಲೆ ಎಲ್ಲರೂ ನಿನ್ನನ್ನು ಹಾಡಿ ಹೊಗಳುವರು.

ಹೆಣ್ಣೆಂದರೆ ಕೇವಲ ತಾಯಿ ಹೃದಯದವಳು, ಕರುಣಾಮೂರ್ತಿ, ವಾತ್ಸಲ್ಯಮಯಿ, ಕ್ಷಮಯಾಧರಿತ್ರಿ ಮಾತ್ರವಲ್ಲ ಅದಕ್ಕೂ ಮಿಗಿಲಾದವಳು ಹೆಣ್ಣು. ನಿನಗೆ ಇಷ್ಟೇ ಬಿರುದುಗಳು ಸಾಕೇ ಅಥವಾ ಇನ್ನು ಬೇರೆ ಹೆಸರುಗಳು ಬೇಕೆ.

ಕಾರ್ಯೇಶು ದಾಸಿ, ಕರಣೇಶು ಮಂತ್ರಿ, ಭೋಜೇಶು ಮಾತಾ, ಶಯನೇಶು ರಂಭ, ಕ್ಷಮೆಯೇಶು ಧರಿತ್ರಿ, ರೂಪೇಶು ಲಕ್ಷ್ಮಿ, ಸತ್ಕರ್ಮಯುಕ್ತ ಕುಲ ಧರ್ಮಪತ್ನಿ, ಭರತಕುಲ ಸ್ತ್ರೀಯೇ ನಿನಗಿದೋ ನಮನ.

**- ಡಾ. ಶಿವಯ್ಯ ಎಸ್.**, ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.

# ಲಷ್ಕರ್‌ನ ಕಾಸಿಮ್ ಉಗ್ರನೆಂದು ಘೋಷಣೆ

ನವದೆಹಲಿ, ಮಾ. 7 – ಲಷ್ಕರ್ ಎ ತೊಯ್ಬಾ ಉಗ್ರವಾದಿ ಸಂಘಟನೆಯ ಮೊಹಮ್ಮದ್ ಕಾಸಿಮ್ ಉಗ್ರ ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಕಾಸಿಮ್ ಹಲವಾರು ಉಗ್ರವಾದಿ ದಾಳಿಗಳಲ್ಲಿ ಭಾಗಿಯಾಗಿದ್ದ.

ಜಮ್ಮು ಮತ್ತು ಕಾಶ್ಮೀರದ ಕಾಸಿಮ್, ಈಗ ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದಾನೆ. ಆತ ನಿಷೇಧಿತ ಲಷ್ಕರ್ ಸಂಘಟನೆಗೆ ಸೇರಿದ್ದಾನೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಉಗ್ರವಾದ ವಿರೋಧಿ ಯು.ಎ.ಪಿ.ಎ. ಕಾಯ್ದೆಯಡಿ ಇದುವರೆಗೂ 57 ವ್ಯಕ್ತಿಗಳನ್ನು ಉಗ್ರರೆಂದು ಘೋಷಿಸಲಾಗಿದೆ.

# ತಾಯಿ ಎದೆ ಹಾಲಿಗಿಂತ ಮಿಗಿಲಾದ ಪೌಷ್ಠಿಕ ಆಹಾರ ಮತ್ತೊಂದಿಲ್ಲ



**(1ನೇ ಪುಟದಿಂದ)** ಅವರು ಶ್ರೀ ತರಳಬಾಳು ಜಗದ್ಗುರುಗಳಿಗೆ ಗೌರವ ಸಮರ್ಪಿಸಿ, ನೆನಪಿನ ಕಾಣಿಕೆ ನೀಡಿದರು.

ಮುಖ್ಯ ಅತಿಥಿಗಳಾಗಿ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ನಿರ್ದೇಶಕರಾದ ಎ.ಎಸ್.ವೀರಣ್ಣ, ಕಿರುವಾಡಿ ಗಿರಿಜಮ್ಮ, ಎ.ಎಸ್.ನಿರಂಜನ್, ಸಂಪನ್ನ ಮುತಾಲಿಕ್ ಆಗಮಿಸಿದ್ದರು.

ಆರಂಭಕ್ಕೆ ಸ್ವಾಗತಿಸಿದ ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಜಿ. ಗುರುಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜೆಜೆಎಂಎಂಸಿ ಮಕ್ಕಳ ವಿಭಾಗದ ಮುಖ್ಯಸ್ಥ ರಾದ ಡಾ.ಮೂಗನಗೌಡ ಪಾಟೀಲ್, ಡಾ. ಬಿ.ಎಂ.ಹರ್ಷ, ಜೆಜೆಎಂಎಂಸಿ ಪ್ರಿನ್ಸಿಪಾಲ್ ಡಾ.ಶುಕ್ಲ ಎಸ್.ಶೆಟ್ಟಿ, ಡೀನ್ ಡಾ.ಆಲೂರು ಮಂಜುನಾಥ್, ಮೆಡಿಕಲ್ ಡೈರೆಕ್ಟರ್ ಡಾ.ಡಿ.ಎಸ್.ಕುಮಾರ್, ಟಿ. ಸತ್ಯನಾರಾಯಣ, ಡಾ.ಸಿ.ಆರ್.ಬಾಣಾಪುರ ಮಠ್ ಮತ್ತಿತರರು ಹಾಜರಿದ್ದರು.

# 5, 8, 9, 11ನೇ ತರಗತಿ ಪರೀಕ್ಷೆಗೆ ಮತ್ತೆ ಅವಕಾಶ

**(1ನೇ ಪುಟದಿಂದ)** ಆದೇಶ ನೀಡಿದೆ.

ಮಾ.11ರಿಂದ 5, 8, 9ನೇ ತರಗತಿಗಳಿಗೆ ಪರೀಕ್ಷೆಗಳು ಆರಂಭವಾಗಲಿವೆ. ವೇಳಾಪಟ್ಟಿಯನ್ನು 2023ರ ಡಿ.12ರಂದು ಪ್ರಕಟಿಸಲಾಗಿತ್ತು. ಈಗಾಗಲೇ ಪರೀಕ್ಷೆ ನಡೆಸಲು ಸರ್ಕಾರ ಮತ್ತು ಅದರ ಪ್ರಾಧಿಕಾರಗಳು ಎಲ್ಲಾ ರೀತಿಯ ಸಿದ್ಧತೆ ನಡೆಸಿವೆ. ತಕರಾರು ಅರ್ಜಿಗಳ ವಿಚಾರಣೆ ಹಂತದಲ್ಲಿ ಏಕ ಸದಸ್ಯ ನ್ಯಾಯಪೀಠವು ಯಾವುದೇ ಮಧ್ಯಂತರ ಆದೇಶ ಮಾಡಿರಲಿಲ್ಲ. ಆದರೆ, ಗುರುವಾರ ಆದೇಶ ಪ್ರಕಟಿಸಿದೆ. ಇಂತಹ ಸಂದರ್ಭದಲ್ಲಿ ಏಕ ಸದಸ್ಯ ಪೀಠದ ಆದೇಶಕ್ಕೆ ತಡೆಯಾಜ್ಞೆ ನೀಡದೇ ಹೋದರೆ ಅನಿಶ್ಚಿತ ಸನ್ನಿವೇಶ ಮುಂದುವರೆಯುತ್ತದೆ ಎಂದು ಪೀಠ ಹೇಳಿದೆ.

ಪರೀಕ್ಷಾ ಮುನ್ನಾ ದಿನ ಇಂತಹ ಸನ್ನಿವೇಶನ ಸೃಷ್ಟಿಯಾಗುವುದು ವಿದ್ಯಾರ್ಥಿ ಸಮುದಾಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬ ಸರ್ಕಾರದ ವಾದ ಸೂಕ್ತವಾಗಿದೆ. ಹಾಗಾಗಿ, ಮೇಲ್ಮನವಿ ಅರ್ಹತೆ ಕುರಿತು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸದೆ ಏಕ ಸದಸ್ಯ ಪೀಠದ ತೀರ್ಪಿಗೆ ತಡೆಯಾಜ್ಞೆ ನೀಡಲಾಗುತ್ತಿದೆ. ಮೇಲ್ಮನವಿ ಕುರಿತ ಮುಂದಿನ ಆದೇಶದವರೆಗೆ, ವಿಲೇವಾರಿಯವರೆಗೆ ತಡೆಯಾಜ್ಞೆ ಆದೇಶ ಜಾರಿಯಲ್ಲಿದೆ ಎಂದು ವಿಭಾಗೀಯ ಪೀಠ ಆದೇಶಿಸಿದೆ.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಮ್ ಹುಯಿಲಗೋಳ ವಾದ ಮಂಡಿಸಿ, ಸೋಮವಾರ ಮಧ್ಯಾಹ್ನ 2.30ಕ್ಕೆ 5, 8 ಮತ್ತು 9ನೇ ತರಗತಿ ಪಬ್ಲಿಕ್ ಪರೀಕ್ಷೆ ಆರಂಭವಾಗಲಿವೆ. 42,255 ಸರ್ಕಾರಿ ಶಾಲೆಗಳು, 2,656 ಅನುದಾನಿತ ಶಾಲೆಗಳು ಸೇರಿದಂತೆ ರಾಜ್ಯದಲ್ಲಿ ಒಟ್ಟು 53,680 ಶಾಲೆಗಳಿವೆ. ರಾಜ್ಯದ ಮಕ್ಕಳ ಹಿತದೃಷ್ಟಿಯಿಂದ ಬೋರ್ಡ್ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಹೇಳಿದರು.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಲೋಪಗಳಿದ್ದು, ಅದನ್ನು ಸರಿಪಡಿಸುವ ನಿಟ್ಟಿನಲಿ ಹೀಗೆ ಮಾಡಲಾಗುತ್ತಿದೆ. ಸರ್ಕಾರ ಪರೀಕ್ಷೆ ಪರಿಚಯಿಸುವಂತಿಲ್ಲ ಎಂದು ಹೇಳಲಾಗದು ಎಂದು ವಾದಿಸಿದರು.

5, 8 ಮತ್ತು 9ನೇ ತರಗತಿಯ 25 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಖಾಸಗಿ ಶಾಲೆಗಳ ಸಂಘಟನೆಯಾದ ರುಪ್ಸಾ ಅತ್ಯಂತ ಕಡಿಮೆ ಶಾಲೆಗಳನ್ನು ಪ್ರತಿನಿಧಿಸುತ್ತದೆ. ಈ ಪೈಕಿ ಖಾಸಗಿ ಅನುದಾನರಹಿತ ಶಾಲೆಯ ಮಕ್ಕಳು ಸುಮಾರು 8 ಲಕ್ಷ ಮಾತ್ರ. ಉಳಿದ 5, 8 ಮತ್ತು 9ನೇ ತರಗತಿಯ 20 ಲಕ್ಷ ವಿದ್ಯಾರ್ಥಿಗಳು ಸೋಮವಾರ ಪರೀಕ್ಷೆ ಬರೆಯಲು ಸಿದ್ಧರಾಗಿದ್ದಾರೆ. 11ನೇ ತರಗತಿ ವಿದ್ಯಾರ್ಥಿಗಳು ಈಗಾಗಲೇ ಪರೀಕ್ಷೆ ಬರೆದಿದ್ದಾರೆ. ವಿದ್ಯಾರ್ಥಿಗಳು ಸೋಮವಾರ ಪರೀಕ್ಷೆ ಬರೆಯಬೇಕಿದೆ. ಈ ಪೈಕಿ ಒಬ್ಬೇ ಒಬ್ಬ ವಿದ್ಯಾರ್ಥಿ ಅಥವಾ ಪೋಷಕರು ಹೈಕೋರ್ಟ್ ಮೆಟ್ಟಿಲೇರಿಲ್ಲ. ತನ್ನ ಹಿತಾಸಕ್ತಿ ಇಂದ ರುಪ್ಸಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಏಕ ಸದಸ್ಯ ಪೀಠದ ಆದೇಶದಿಂದ ಮಕ್ಕಳಿಗೆ ಪರೀಕ್ಷೆ ವಿಚಾರದಲ್ಲಿ ಅನಿಶ್ಚಿತತೆ ಎದುರಾಗಿದೆ ಎಂದು ವಿವರಿಸಿದರು.

ಬೋರ್ಡ್ ಪರೀಕ್ಷೆಯಲ್ಲಿ ಯಾವ ವಿದ್ಯಾರ್ಥಿಯನ್ನೂ ಅನುತ್ತೀರ್ಣ ಮಾಡುವುದಿಲ್ಲ. ಕಲಿಕೆ ಗುಣಮಟ್ಟವನ್ನು ವೃದ್ಧಿಸುವ ಹಾಗೂ ವಿದ್ಯಾರ್ಥಿಗಳ ಪ್ರತಿಭೆ ಮೌಲ್ಯಮಾಪನ ಮಾಡುವ ಉದ್ದೇಶದಿಂದ ಬೋರ್ಡ್ ಪರೀಕ್ಷೆ ನಡೆಸಲಾಗುತ್ತಿದೆ. ಫಲಿತಾಂಶವನ್ನು ಬಹಿರಂಗಪಡಿಸುವುದಿಲ್ಲ. ಆಯಾ ವಿದ್ಯಾರ್ಥಿ ಹಾಗೂ ಪೋಷಕರಿಗೆ ಖುದ್ದಾಗಿ ತಲುಪಿಸಲಾಗುತ್ತಿದೆ ಎಂದೂ ಅವರು ಹೇಳಿದರು.

# ಬೊಮ್ಮಾಯಿ, ಶೆಟ್ಟರ್ ಸ್ಪರ್ಧೆ ?

ಬೆಂಗಳೂರು, ಮಾ. 7 – ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಜಗದೀಶ್ ಶೆಟ್ಟರ್ ಅವರು ಸ್ಪರ್ಧಿಸುವ ಸಾಧ್ಯತೆ ಇದೆ.

ಈ ಬಗ್ಗೆ ಇಂಗಿತ ವ್ಯಕ್ತಪಡಿಸಿರುವ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಜೊತೆ ಈ ಬಗ್ಗೆ ಚರ್ಚಿಸಲಾಗಿದೆ. ಆದರೆ, ಅಂತಿಮ ನಿರ್ಧಾರವಾಗಿಲ್ಲ ಎಂದಿದ್ದಾರೆ. ಬೊಮ್ಮಾಯಿ ಅವರನ್ನು ಹಾವೇರಿಯಿಂದ ಹಾಗೂ ಶೆಟ್ಟರ್ ಅವರನ್ನು ಬೆಳಗಾವಿಯಿಂದ ಕಣಕ್ಕಿಳಿಸಲು ಬಿಜೆಪಿ ವಲಯದಲ್ಲಿ ಚಿಂತಿಸಲಾಗುತ್ತಿದೆ.

# ರಾಜ್ಯ ಮಟ್ಟದ ಪ್ರಶಸ್ತಿಗೆ ಪಾಲಿಕೆ

**(1ನೇ ಪುಟದಿಂದ)** ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ ಉಪ ಘಟಕ, ಸ್ಥಳೀಯ ಬೀದಿ ಬದಿ ವ್ಯಾಪಾರಿಗಳಿಗೆ ಬೆಂಬಲ ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮದಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ಸಾಧನೆ ಮಾಡಿದೆ ಎಂದು ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಪ್ರಕಟಣೆಯಲ್ಲಿ ವಿವರಿಸಲಾಗಿದೆ.


**ವಾಣಿಜ್ಯೋಪಯೋಗಿ ಮಳಿಗೆ ಬಾಡಿಗೆಗಿದೆ**
ದಾವಣಗೆರೆಯ ಶಾಮನೂರು ರಸ್ತೆ, ಎಸ್.ಎಸ್.ಮಾಲ್ ಸಮೀಪ, ಕ್ಲರ್ಕ್ಸ್ ಇನ್ ಲಾಡ್ಜ್ ಎದುರು, ಸುಮಾರು 1100 ಚ.ಅಡಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ :
98808 72900

**ಕಛೇರಿ ಸ್ಥಳಾಂತರ**
ದಾವಣಗೆರೆಯಲ್ಲಿರುವ ಆಶೀರ್ವಾದ ಮೈಕ್ರೋ ಫೈನಾನ್ಸ್ ಲಿಮಿಟೆಡ್ ಕಛೇರಿಯನ್ನು ಅನುಷಾ ನಿಲಯ ರಾಜನಹಳ್ಳಿ ಹನುಮಂತಪ್ಪ ಪಾರ್ಕ್ ಹತ್ತಿರ ಡಿಸಿಎಂ ಟೌನ್ ಶಿಪ್‌ನಿಂದ ಈಗ ಎಪಿಎಂಸಿ ಮಾರುಕಟ್ಟೆ 'ಬಿ' ಬ್ಲಾಕ್ ಎತ್ತಿನ ಸಂತೆ ಎದುರು ದಾವಣಗೆರೆ ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಹೆಚ್ಚಿನ ವಿವರಣೆಗೆ ಸಂಪರ್ಕಿಸಿ :
99459 97711, 63837 50567

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505/9449805750

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸೆಲ್ ಕಟ್ಟಲು ಹಾಗೂ ಇಡ್ಲಿ, ವಡ (ಅನುಭವ ಉಳ್ಳವರು) ಭಟ್ಟರು, ಅನುಭವವುಳ್ಳ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
70194 69302

**ಬೇಕಾಗಿದ್ದಾರೆ**
ತೋಟಕ್ಕೆ ಟ್ಯಾಂಕರ್ ನೀರು ಹೊಡೆಯುವವರು ಬೇಕಾಗಿದ್ದಾರೆ. ಹದಡಿ ಹತ್ತಿರದ ಕೈದಾಳೆಯಲ್ಲಿರುವ ತೋಟಕ್ಕೆ 5, 10, 20 ಸಾವಿರ ಲೀಟರ್ ಟ್ಯಾಂಕರ್ ನವರು ಸಂಪರ್ಕಿಸಿ.
98807 39392

**ಸೈಟ್ ಮಾರಾಟಕ್ಕಿದೆ**
ಪೂರ್ವ ದಿಕ್ಕಿನ 65x65 ಅಳತೆಯ ಕಾರ್ನರ್ ಸೈಟ್ ರಶ್ಮಿ ಹಾಸ್ಟೆಲ್ ಹತ್ತಿರ, ಮಹಾಲಕ್ಷ್ಮೀ ಲೇಔಟ್, ದಾವಣಗೆರೆ.
63605 94165
95384 86666

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ಬಡಾವಣೆಯಲ್ಲಿ ಪಶ್ಚಿಮ ದಿಕ್ಕಿನ ಅಕ್ಕ-ಪಕ್ಕ 30x50, 30x50 ಶಾಮನೂರು ಹತ್ತಿರ, ಡಾಲರ್ಸ್ ಕಾಲೋನಿಯಲ್ಲಿ ಪೂರ್ವ ದಕ್ಷಿಣ ಸೈಟ್ ಒಟ್ಟು ಅಳತೆ 1994 ಅಡಿ.
ಮಂಜುನಾಥ ಏಜೆಂಟ್
98444 91792

**O.T STAFF ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಆಪರೇಷನ್ ಥಿಯೇಟರ್‌ನಲ್ಲಿ ಅನುಭವವುಳ್ಳ O.T Staff ಬೇಕಾಗಿದ್ದಾರೆ.
9972523910

**ROOM FOR RENT**
Single ROOM at Second floor, Avialabel for rent. Address : #1982/2, 6 th Cross, Siddaveerappa Layout, Davanagere.
94806 93506

**ಶ್ರೀ ಸಾಯಿ ಕ್ಯಾಟರಿಂಗ್**
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಅಡುಗೆ ಮಾಡಿ ಕೊಡಲಾಗುವುದು.
ಸಂಪರ್ಕಿಸಿ :
94489 24273

**ಶಿಕ್ಷಕಿಯರು ಬೇಕಾಗಿದ್ದಾರೆ**
(ಕಾಡಜ್ಜಿ) ಪ್ಲೇ ಗ್ರೂಪ್ ನಿಂದ 8ನೇ ತರಗತಿಯವರೆಗೆ ಅರ್ಹ ಶಿಕ್ಷಕರು ಬೇಕಾಗಿದ್ದಾರೆ. ಈ ವಿಷಯಗಳಿಗೆ ಅರ್ಜಿ ಸಲ್ಲಿಸಿ. English, Hindi, Social, Science, Mathematics. ಸಂಪರ್ಕಿಸಿ :
99729 35569

**ಸಪ್ಲೈಯರ್ಸ್ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ ಅಂಡ್ ರೆಸ್ಟೋರೆಂಟ್, ಹರಿಹರ. ಸಂಪರ್ಕಿಸಿ :
99726 98591
94490 37488

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ನಾಟಿ ಕೋಳಿ ಹಾಗೂ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**WALK IN INETRVIEW**
Required for Entire Karnataka
**Team Leaders**
(For Banking Recovery & Collections)
Salary Upto 30,000/- + Incentive
**Telecallers**
(Computer Knowledge must)
Salary upto 10,000/- + Incentive
**Field Executives**
2 wheeler must, Salary upto 15,000/- + Incentive + Insurance facility.
9108453333, 8310034934

**SRE TOURIST ದಾವಣಗೆರೆ**
ದಿನಾಂಕ 10.06.2024 ಉತ್ತರ ಭಾರತದ 7 ದಿನಗಳ ಪ್ರವಾಸ
• ದೆಹಲಿ • ಮಥುರಾ • ಆಗ್ರಾ • ಪ್ರಯಾಗ್‌ರಾಜ್ • ಸೀತಾಮುಡಿ • ಅಯೋಧ್ಯೆ • ಕಾಶಿ
2 ಸೈಡ್ ವಿಮಾನ, ಎ.ಸಿ. ಬಸ್, ಎ.ಸಿ. ರೂಂ ತಿಂಡಿ ಮತ್ತು ಉಪಹಾರ ಪ್ರವೇಶ ಶುಲ್ಕ ಸೇರಿ ಸೀಟು ಒಂದಕ್ಕೆ 34,000/-
ಮೊ : 99868 18205

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ**
**ಫ್ಯಾಷನ್ ವೇವ್ಸ್**
ಫುಲ್ ಟೈಂ / ಪಾರ್ಟ್ ಟೈಂ
1 ರಿಂದ 2 ವರ್ಷ ಅನುಭವ ಇರುವವರು
2007/18, 2ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ಬಿಐಇಟಿ ಕಾಲೇಜ್ ಹತ್ತಿರ, ದಾವಣಗೆರೆ.
99725 09819

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಕಮರ್ಷಿಯಲ್ ಗಾಡಿ ಮಾರಾಟಕ್ಕಿದೆ**
ಮಾರುತಿ ಸೂಪರ್ ಕ್ಯಾರಿ 25,000 KM ಓಡಿರುವ CNG+ ಪೆಟ್ರೋಲ್ ವೇರಿಯಂಟ್ ಕಮರ್ಷಿಯಲ್ ವೆಹಿಕಲ್ ಮಾರಾಟಕ್ಕಿದೆ.
63605 94165

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**REQUIRED**
FIELD SALES EXECUTIVES
for Leading e-Commerce Company
Indiamart Intermesh Limited
For Davangere Location.
(Fresher's/Experienced)
Age : below 32 yrs.,
Any Graduate/Diploma.
Salary : 15 k to 18 k + Incentive.
Send your CV/whatsapp Location: Davangere.
AFROZ - 97401 06740
JIBRAN - 99015 71166
80730 50877

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸೆನ್ಸ್ ಹಾಗೂ ದ್ವಿಚಕ್ರ ವಾಹನ ಹೊಂದಿರುವ ಕಾರ್ ಡ್ರೈವರ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
94486 56091
(ಮೇಲ್ಕಂಡ ನಂಬರಿಗೆ ಈ ಹಿಂದೆ ಕರೆ ಮಾಡಿದವರು ಪುನಃ ಮಾಡಬೇಡಿ)

**ಇಂಡಸ್ಟ್ರೀಯಲ್ ಸೈಟುಗಳು ಮಾರಾಟಕ್ಕಿವೆ**
ಬಂಬೂ ಬಜಾರ್ ಪಕ್ಕದಲ್ಲಿರುವ ಬಸಾಪುರ ರಸ್ತೆಯಲ್ಲಿ ಫೈನಲ್ ಅಪ್ರೂವಲ್‌ನೊಂದಿಗೆ ಕಾರ್ಪೊರೇಷನ್ ಡೋರ್ ನಂಬರ್ ಹೊಂದಿರುವ 2 ರಿಂದ 3 ಸೈಟುಗಳು ಮಾರಾಟಕ್ಕಿವೆ.
98441 88191

**ಬೇಕಾಗಿದ್ದಾರೆ**
ನಮ್ಮ ಮಾರಾಟ ಮಳಿಗೆಯಲ್ಲಿ ಕೌಂಟರ್ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಕೆಲಸದ ಸ.: ಬೆ. 9 ರಿಂದ ಸಂ. 9 ಸೇಲ್ಸ್ ವಿಭಾಗ
**ಪರಿಮಳ ಕಾಫಿ ಕಂಪನಿ,**
ಮಂಡಿಪೇಟೆ, ದಾವಣಗೆರೆ.
94482 72734

**ಬೇಕಾಗಿದ್ದಾರೆ**
ಕಾರ್ ವಾಷ್, ವ್ಹೀಲ್ ಅಲೈನ್‌ಮೆಂಟ್ ಬ್ಯಾಲೆನ್ಸಿಂಗ್ & ಕಾರ್ ಎಲೆಕ್ಟ್ರಿಷಿಯನ್ ಪೀಸ್ ವರ್ಕ್ ಮಾಡಲು ಬೇಕಾಗಿದ್ದಾರೆ.
**ಶ್ರೀ ಪ್ರಿಯಾ ಕಾರ್ ಕೇರ್**
ವಿದ್ಯಾನಗರ, ದಾವಣಗೆರೆ.
8867322545, 7349194155, 8867322645

**ಹೆಸರು ಸ್ಪಷ್ಟೀಕರಣ**
ಶ್ರೀಮತಿ ಪುಷ್ಪಾ ಯಾನೆ ಗೌರಮ್ಮ ಕೋಂ ಪರಶುರಾಮ್ ವಯಸ್ಸು 35 ವರ್ಷ, 3ನೇ ಮೇನ್, 9ನೇ ಕ್ರಾಸ್, ಯಲ್ಲಮ್ಮ ನಗರ ದಾವಣಗೆರೆ ವಾಸಿಯಾದ ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನ್ನ ಆಧಾರದ ಕಾರ್ಡ್ ನಂ. 736809887134 ರಲ್ಲಿ ಬಿ.ಪಿ.ಎಲ್. ಪಡಿತರ ಚೀಟಿಯಲ್ಲಿ ನಂ. 12020024 2727 ರಲ್ಲಿ ನನ್ನ ಹೆಸರು ಪುಷ್ಪಾ ಎಂದು ನಮೂದಾಗಿರುತ್ತದೆ. ಆದರೆ ನನ್ನ ಶಾಲಾ ದಾಖಲೆಗಳಲ್ಲಿ ನಂ. 93/1989-90 ರಲ್ಲಿ ನನ್ನ ಹೆಸರು ಗೌರಮ್ಮ ಎಂದು ನಮೂದಾಗಿರುತ್ತದೆ. ಗೌರಮ್ಮ ಎನ್ನುವುದು ನನ್ನ ವಿವಾಹ ಪೂರ್ವ ಹೆಸರಾಗಿರುತ್ತದೆ. ನನ್ನ ವಿವಾಹದ ನಂತರ ನನ್ನ ಹೆಸರು ಪುಷ್ಪಾ ಎಂದಾಗಿರುತ್ತದೆ. ನನ್ನ ಮಗನಾದ ಧನಂಜಯ, ಪಿ. ಇವನ ಶಾಲಾ ದಾಖಲಾತಿ ನಂ : 48/2021-22 ರಲ್ಲಿ ನನ್ನ ಮಗನ ಜನನ ಪ್ರಮಾಣ ಪತ್ರ, ನಂ : 2006-ಬಿ-11665ರಲ್ಲಿ ನನ್ನ ಹೆಸರು ಗೌರಮ್ಮ ಎಂದು ನಮೂದಾಗಿರುತ್ತದೆ. ಪುಷ್ಪಾ ಹಾಗೂ ಗೌರಮ್ಮ ಎರಡೂ ನನ್ನ ಹೆಸರಗಳಾಗಿರುತ್ತವೆ. ಗೌರಮ್ಮ

Use Summer Holidays Effectively
**Kids Summer Computer Education**
Learn Computer Basics, MS-Office & Internet
**IATM Computers**
2nd main, Akkamahadevi Samaja Complex, PJ Exten, 6th Cross, Ram & Co. Circle, Davangere.
Call for more Information
98867 63469, 90367 19573

**WANTED**
PUC / Any degree / Diploma / (Pass or Fail) with Computer Knowledge is must for male & female. Contact : Excellent Electronics, # 2137/1, 4th main, 3rd Cross, MCC `A' Block (Near Guru Searching Centre) Davanagere - 577004.
98865 15100

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಷೇರು ಬಾಂಡ್ ಕಳೆದಿದೆ**
ಜಿ. ತಿಪ್ಪಣ್ಣ ಬಿನ್ ಲೇಟ್ ಚನ್ನಬಸಪ್ಪನವರು ದಾವಣಗೆರೆ ಷುಗರ್ ಫ್ಯಾಕ್ಟರಿಯಲ್ಲಿ ಷೇರುಗಳನ್ನು ಹೊಂದಿರುವ ಷೇರು ಪತ್ರ DSK1164, DSN0978, ಸರ್ಟಿಫಿಕೇಟ್ ನಂ. 107583, 108144, 106256 ಷೇರು ಕ್ರಮವಾಗಿ 50,50,55 ಆಗಿರುತ್ತದೆ. ದಿ.: 6.3.2024ರಂದು ದಾವಣಗೆರೆಯಿಂದ ಕುಕ್ಕುವಾಡಕ್ಕೆ ಹೋಗುವಾಗ ಕಳೆದಿರುತ್ತವೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಿ.
96200 68395

## ಹರಿಹರದ ಬ್ರಹ್ಮಾಕುಮಾರೀಸ್ ಸಂಸ್ಥೆಯಿಂದ ಇಂದು ಮಹಾಶಿವರಾತ್ರಿ, ಮಹಿಳಾ ದಿನಾಚರಣೆ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಮಹಾಶಿವರಾತ್ರಿ ಕಾರ್ಯಕ್ರಮ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಮುಖ್ಯಸ್ಥರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವದೇವಿ ಅವರು ತಿಳಿಸಿದ್ದಾರೆ. ಶಿವರಾತ್ರಿ ಪ್ರಯುಕ್ತ ಸಂಕರ್ಷಣ ನೃತ್ಯಾಲಯದ ಗುರು ಹಾಗೂ ಶಿಷ್ಯ ವೃಂದದಿಂದ ಶಿವ ತಾಂಡವ ಮತ್ತು ಅರ್ಧನಾರೀಶ್ವರ ನೃತ್ಯ, ನಂತರ ದ್ವಾದಶ ಜ್ಯೋತಿರ್ಲಿಂಗಗಳ ಶೋಭಾಯಾತ್ರೆ ಹಾಗೂ ವಿಶೇಷವಾಗಿ ಅಮರನಾಥ ದರ್ಶನ ಏರ್ಪಡಿಸಲಾಗಿದೆ.

## ನಗರದ ಸತ್ಯಸಾಯಿ ಮಂದಿರದಲ್ಲಿ ಇಂದು ಶಿವರಾತ್ರಿ

ಮಹಾ ಶಿವರಾತ್ರಿಯ ಪ್ರಯುಕ್ತ ಪಿ.ಜೆ. ಬಡಾವಣೆಯಲ್ಲಿರುವ ಶ್ರೀ ಸತ್ಯಸಾಯಿ ಮಂದಿರ ( ಸತ್ಯಂ-ಶಿವಂ-ಸುಂದರಂ) ದಲ್ಲಿ ಇಂದು ಬೆಳಗ್ಗೆ 5.15 ರಿಂದ, ನಾಳೆ ಶನಿವಾರ ಬೆಳಿಗ್ಗೆ 6 ರವರೆಗೆ ವಿವಿಧ ಧಾರ್ಮಿಕ ಸಾಧನೆಗಳು ನಡೆಯಲಿವೆ. ಬೆಳಿಗ್ಗೆ 5.15ಕ್ಕೆ ಓಂಕಾರ, ಸುಪ್ರಭಾತ ಮತ್ತು ನಗರ ಸಂಕೀರ್ತನೆ ಇರುತ್ತದೆ. 7 ಗಂಟೆಗೆ ಶ್ರೀ ಸಾಯೀಶ್ವರ ಲಿಂಗಕ್ಕೆ ರುದ್ರಾಭಿಷೇಕ ನಡೆಯಲಿದೆ. ಸಂಜೆ 4 ಗಂಟೆಯಿಂದ 7 ಗಂಟೆಯವರೆಗೆ ಶ್ರೀ ಸಾಯೀಶ್ವರ ಲಿಂಗಕ್ಕೆ ರುದ್ರಾಭಿಷೇಕ ಏಕಾದಶ ರುದ್ರಾಭಿಷೇಕ ನಡೆಯಲಿದೆ. ರಾತ್ರಿ 7 ಗಂಟೆಯಿಂದ 8 ಗಂಟೆಯ ವರೆಗೆ ಸಾರ್ವಜನಿಕರು ರುದ್ರಾಭಿ ಷೇಕ ನಡೆಸಲು ಅವಕಾಶವಿರುತ್ತದೆ. ಇಂದು ರಾತ್ರಿ 8 ಗಂಟೆಯಿಂದ ಶನಿವಾರ ಬೆಳಿಗ್ಗೆ 6 ಗಂಟೆಯ ವರೆಗೆ ಭಜನೆಯ ಮೂಲಕ ಜಾಗರಣೆ ನಡೆಯಲಿದೆ ಎಂದು ಸಂಚಾಲಕರಾದ ಪಾಂಡುರಂಗ ರಾವ್ ತಿಳಿಸಿದ್ದಾರೆ.

## ಇಂದು ಮಹಾಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ

ದಾವಣಗೆರೆ, ಮಾ.7- ಇಲ್ಲಿನ ಕೆಟಿಜೆ ನಗರದ 10ನೇ ತಿರುವಿನಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಾ.8ರ ಇಂದು ಸಂಜೆ 7ಕ್ಕೆ ಮಹಾಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ ನಡೆಯಲಿದೆ. ಪೂಜೆಯ ನಂತರ ಫಲಹಾರ ವ್ಯವಸ್ಥೆ ಮಾಡಲಾಗಿದ್ದು, ಭಕ್ತರು ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೆಪಿಸಿಸಿ ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು 'ಓಂ ಶಿವೋಹಂ' ನೃತ್ಯ

ಪಿ.ಜೆ. ಬಡಾವಣೆಯ ಶ್ರೀ ಸಂಗಮೇಶ್ವರ ದೇವಾಲಯದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ನೃತ್ಯ ವಿದ್ಯಾನಿಲಯ ಇವರ ವತಿಯಿಂದ ಇಂದು ಸಂಜೆ 7 ಗಂಟೆಗೆ 'ಓಂ ಶಿವೋಹಂ' ಸಂಗೀತ, ಭರತನಾಟ್ಯ, ಜಾನಪದ, ಯಕ್ಷಗಾನ ಕಾರ್ಯಕ್ರಮಗಳು ನಾಟ್ಯ ವಿದುಷಿ ರಕ್ಷಾ ರಾಜಶೇಖರ್ ಇವರ ಮಾರ್ಗದರ್ಶನದಲ್ಲಿ ಜರುಗಲಿವೆ.

# ಭವ್ಯ ಭಾರತ ನಿರ್ಮಾಣದಲ್ಲಿ ಯುವ ವಕೀಲರು ಭಾಗಿಯಾಗಲಿ



### ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್

ದಾವಣಗೆರೆ, ಮಾ. 7 - ಸ್ವಾತಂತ್ರ್ಯ ಹೋರಾಟದಲ್ಲಿ ವಕೀಲರು ಪ್ರಮುಖ ಪಾತ್ರ ವಹಿಸಿದ್ದರು. ಈಗ ಭವ್ಯ ಭಾರತ ನಿರ್ಮಾಣದಲ್ಲಿ ಯುವ ವಕೀಲರು ಕೊಡುಗೆ ನೀಡಬೇಕಿದೆ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಹೇಳಿದರು.

ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಇಂದು ಏರ್ಪಾಡಾಗಿದ್ದ ಕಾಲೇಜಿನ ಸುವರ್ಣ ಮಹೋತ್ಸವದ ಕಟ್ಟಡ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಈಗಿನ ಯುವ ಪೀಳಿಗೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಅವಕಾಶ ದೊರೆಯದೇ ಇರಬಹುದು. ಆದರೆ, ಭವ್ಯ ಹಾಗೂ ಸಮೃದ್ಧ ಭಾರತವನ್ನು ನಿರ್ಮಿಸುವ ಅವಕಾಶ ದೊರೆತಿದೆ. ಈ ಸಾಮಾಜಿಕ ಹೊಣೆಗಾರಿಕೆಯಲ್ಲಿ ಭಾಗಿಯಾಗಬೇಕು ಎಂದವರು ಕರೆ ನೀಡಿದರು.

ಯಾವುದೇ ಶಿಕ್ಷಣ ಸಂಸ್ಥೆಯ ಬೆಳವಣಿಗೆಗೆ ಅರ್ಥ ಮಾಡಿಕೊಳ್ಳುವ ಆಡಳಿತ ಮಂಡಳಿ, ಚೈತನ್ಯಶೀಲ ಪ್ರಾಂಶುಪಾಲ, ಶ್ರದ್ಧೆಯುಳ್ಳ ಶಿಕ್ಷಕರು, ಶಿಸ್ತಿನ ವಿದ್ಯಾರ್ಥಿಗಳು ಹಾಗೂ ಸಹಕಾರ ನೀಡುವ ಪಾಲಕರ ಅಗತ್ಯವಿದೆ ಎಂದು ನ್ಯಾಯಮೂರ್ತಿ ಪಾಟೀಲ್ ಹೇಳಿದರು.

ಶಿಕ್ಷಕರಿಗೆ ವಿದ್ಯಾರ್ಥಿಗಳಿಂದ ಅಪಾರ ಗೌರವ ಸಿಗುತ್ತದೆ. ಶಿಷ್ಯರು ಎಷ್ಟೇ ದೊಡ್ಡ ಹುದ್ದೆಗೆ ತಲುಪಿದರೂ ತಮ್ಮ ಉತ್ತಮ ಶಿಕ್ಷಕರನ್ನು ಮರೆಯುವುದಿಲ್ಲ ಎಂದವರು ಅಭಿಪ್ರಾಯಪಟ್ಟರು.

### ಕಾನೂನು ಕಾಲೇಜುಗಳ ಗುಣಮಟ್ಟ ಉತ್ತಮವಾಗಿರಬೇಕು

ನಾನು ಕಾನೂನು ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ, ಕಾನೂನು ಶಾಲೆಗಳಿಗೆ ಸೇರುವುದು ಮೊದಲ ಆದ್ಯತೆಯಾಗಿರಲಿಲ್ಲ. ಈಗ ಕಾನೂನು ಅಧ್ಯಯನಕ್ಕೆ ಅಪಾರ ಬೇಡಿಕೆ ಇದೆ. ಈ ಬೇಡಿಕೆಗೆ ಅನುಗುಣವಾಗಿ ಕಾಲೇಜುಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. 22 ರಾಷ್ಟ್ರೀಯ ಕಾನೂನು ಶಾಲೆಗಳು ನಿರ್ಮಾಣವಾಗಿವೆ. ಆದರೆ, ಗುಣಮಟ್ಟವೂ ಅದೇ ಹಂತದಲ್ಲಿ ಇರಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಹೇಳಿದರು.

### ಪಾವತಿಗಿಂತ ಪ್ರಾರ್ಥನೆಯೇ ಅಮೂಲ್ಯ

ಶ್ರೀಮಂತ ಕಕ್ಷಿದಾರರು ಹೆಚ್ಚು ಶುಲ್ಕ ಪಾವತಿಸಬಹುದು. ಆದರೆ, ಬಡ ಕಕ್ಷಿದಾರರಿಗೆ ವಕೀಲರು ಉಚಿತ ಸೇವೆ ನೀಡಿದಾಗ, ನಿಮಗಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಪಾವತಿಗಿಂತ ಪ್ರಾರ್ಥನೆಯೇ ಹೆಚ್ಚು ಅಮೂಲ್ಯ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಹೇಳಿದರು.

ನನಗಿಂತ ಹೆಚ್ಚು ಅಧ್ಯಯನಶೀಲ, ಸಮರ್ಥರಾದ ಹಲವಾರು ನ್ಯಾಯಮೂರ್ತಿಗಳಿದ್ದರು. ಆದರೂ, ನನಗೇ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯ ಸ್ಥಾನ ದೊರೆಯಲು ಬಡವರ ಪ್ರಾರ್ಥನೆಯೇ ಕಾರಣ ಎಂದವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಬಾಪೂಜಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಅಥಣಿ ವೀರಣ್ಣ, ಜಾಗತೀಕರಣದ ನಂತರ ವಕೀಲ ವೃತ್ತಿಗೆ ಸಾಕಷ್ಟು ಬೇಡಿಕೆ ಬಂದಿದೆ. ಹೆಣ್ಣು ಮಕ್ಕಳಿಗೆ ಸಮಾನ ಆಸ್ತಿ ಹಕ್ಕು ನೀಡಿದ ನಂತರವೂ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಇದು ವಕೀಲರ ಬೇಡಿಕೆ ಹೆಚ್ಚಾಗಲು ಕಾರಣ ಎಂದರು.

ಆರ್.ಎಲ್. ಕಾನೂನು ಕಾಲೇಜಿಗೆ ಹೆಚ್ಚು ವಿದ್ಯಾರ್ಥಿಗಳು ಬರುತ್ತಿರುವ ಹಿನ್ನೆಲೆಯಲ್ಲಿ, 6 ಕೊಠಡಿಗಳನ್ನು ನಿರ್ಮಿಸಿರುವುದು ಉಪಯುಕ್ತವಾಗಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆಗಿರುವ ಹಿರಿಯ ನ್ಯಾಯಾಧೀಶರಾದ ಮಹಾವೀರ ಕರೆಣ್ಣವರ್, ಬಾಪೂಜಿ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ, ಆರ್.ಎಲ್. ಕಾನೂನು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಆರ್.ಎಲ್. ಉಮಾ ಶಂಕರ್, ಉದ್ಯಮಿ ಸಮರ್ಥ್ ಶಾಮನೂರು ಮತ್ತಿತರರು ಉಪಸ್ಥಿತರಿದ್ದರು.

ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಜಿ.ಎಸ್. ಯತೀಶ್ ಸ್ವಾಗತಿಸಿದರು. ಕಿರಣ್ ಪ್ರಾರ್ಥಿಸಿದರೆ, ನಂದಿನಿ ಆರ್. ಪಾಟೀಲ್ ಹಾಗೂ ಕೆ.ಜಿ. ರೇವತಿ ನಿರೂಪಿಸಿದರು.

## ಬಿಐಇಟಿ ಆವರಣದ ಶಿವಧ್ಯಾನ ಮಂದಿರದಲ್ಲಿಂದು ಭಕ್ತಿ ಮಂಜರಿ



ಬಿಐಇಟಿ ಕಾಲೇಜು ಮೈದಾನದಲ್ಲಿರುವ ಶಿವಧ್ಯಾನ ಮಂದಿರದಲ್ಲಿ ಇಂದು ಮಹಾಶಿವರಾತ್ರಿ ಪ್ರಯುಕ್ತ ಖ್ಯಾತ ಹಿಂದೂಸ್ಥಾನಿ ಗಾಯಕರಾದ ಶ್ರೀಮತಿ ಎಂ.ಡಿ. ಪಲ್ಲವಿ ಇವರಿಂದ ಭಕ್ತಿ ಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಈ ಸಂದರ್ಭದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ, ಯಜಮಾನ್ ಮೋತಿ ವೀರಣ್ಣ, ಆರ್.ವಿ. ಬಕ್ಕಪ್ಪ, ಹರಿಹರದ ಕರಿಬಸಪ್ಪ, ಎಂ.ಕೆ. ಬಕ್ಕಪ್ಪ, ಕಿರುವಾಡಿ ಸೋಮಣ್ಣ, ಕುದುರಿ ಕರಿಬಸಪ್ಪ, ಎನ್.ಕೆ. ಕೊಟ್ರೇಶ್, ಮೆರವಣಿಗೆ ಜಯವಿಭವ, ಹೋಲೂರು ಶಂಭಣ್ಣ, ಹೋಲೂರು ಚಂದ್ರಕೀರ್ತಿ, ಕೆ.ಎನ್. ಮೃತ್ಯುಂಜಯ, ಕೋಡಬಾಳು ಚನ್ನಬಸಪ್ಪ, ಚಿಂದೋಡಿ ಚಂದ್ರಧರ, ಕುಂದರಿ ವಿಶ್ವನಾಥ್, ಶಾಮನೂರು ವಿಜಯ್, ಮಲ್ಲಾಬಾದಿ ಮಹಾದೇವ್ ಮೂರ್ತಿ, ಮೆರವಣಿಗೆ ನಿರಂಜನ, ಭಕ್ತಾದಿಗಳಾದ ಸುರೇಶ ಬಿ. ಅರವಿ, ಮಲ್ಲಾಬಾದಿ ಗುರುಬಸವರಾಜ್, ಕುದುರಿ ಉಮೇಶ್, ಟಿ. ವೀರೇಶ್, ವೀರೇಶ್ ಅರವಿ, ಕುದುರಿ ಮುರುಗೇಂದ್ರಪ್ಪ, ಕೆ.ಬಿ. ಪ್ರಭು ಹಾಗೂ ಭಕ್ತಾದಿಗಳು ಉಪಸ್ಥಿತರಿರುವರು.

ನಾಗರಿಕರು ಕಾರ್ಯಕ್ರಮ ಮತ್ತು ಶಿವ-ಪೂಜೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಬೇಕಾಗಿ ಶಿವಧ್ಯಾನ ಮಂದಿರದ ಭಕ್ತ ವೃಂದದವರು ತಿಳಿಸಿದ್ದಾರೆ.

## ನಗರದ ಪಂಚ ದೇವಸ್ಥಾನದಲ್ಲಿಂದು ಶಿವರಾತ್ರಿ ಅಭಿಷೇಕ, ವಿಶೇಷ ಪೂಜೆ

ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಶ್ರೀ ಕಾಶಿ ಮಹಾಲಿಂಗೇಶ್ವರನಿಗೆ ಹಾಗೂ ಶ್ರೀ ಶನೇಶ್ವರ ಸ್ವಾಮಿಗೆ ಶಿವರಾತ್ರಿ ಅಭಿಷೇಕ, ವಿಶೇಷ ಪೂಜೆ, ಪಿ.ಬಿ ರಸ್ತೆ ಕರೂರ್ ಕ್ರಾಸ್ ಹತ್ತಿರ ಇರುವ ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಇಂದು ಸಂಜೆ 6 ಗಂಟೆಗೆ ಶಿವರಾತ್ರಿಯ ಪ್ರಯುಕ್ತ ಪಂಚದೇವರುಗಳಿಗೆ ಹಾಗೂ ಶ್ರೀ ಕಾಶಿ ಮಹಾಲಿಂಗೇಶ್ವರನಿಗೆ ಹಾಗೂ ಶ್ರೀ ಶನೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ತೈಲಭಿಷೇಕ ಹಾಗೂ ಭಕ್ತಾದಿಗಳಿಗೆ ದೇವಸ್ಥಾನದಿಂದ ಶಿವರಾತ್ರಿ ಪ್ರಯುಕ್ತ ಉಚಿತ ರುದ್ರಾಕ್ಷಿ ನೀಡಲಾಗುವುದು.

## ರಾಣೇಬೆನ್ನೂರಿನಲ್ಲಿ ಇಂದು ದೊಡ್ಡಾಟ ಪ್ರದರ್ಶನ

ಇಂದು ರಾತ್ರಿ 8 ಗಂಟೆಗೆ ವಿದ್ಯಾನಗರದ ವೀರಾಂಜನೇಯ ದೇವಸ್ಥಾನದಲ್ಲಿ ಹುಬ್ಬಳ್ಳಿಯ ಜನಪದ ಕಲಾ ಬಳಗದಿಂದ 'ಶ್ರೀ ರಾಮಚಂದ್ರ' ದೊಡ್ಡಾಟ ಪ್ರದರ್ಶನ ಏರ್ಪಡಿಸಲಾಗಿದೆ. ಮಾಜಿ ಶಾಸಕ ಅರುಣಕುಮಾರ ಪೂಜಾರ ಉದ್ಘಾಟಿಸುವರು. ಆಂಜನೇಯ ಚಿಂತಾ ಅಧ್ಯಕ್ಷತೆ ವಹಿಸುವರು. ಡಾ. ಎಸ್.ಜಿ. ವೈದ್ಯ, ಡಾ. ಶಶಿಕುಮಾರ ಮೆಹರವಾಡೆ, ರಮೇಶ ಕರಬಸಮ್ಮನವರ ಹಾಗೂ ಕೆ.ಎನ್.ಪಾಟೀಲ ಭಾಗವಹಿಸುವರು.

## ಮಲೇಬೆನ್ನೂರಿನಲ್ಲಿ ಇಂದು 108 ಶಿವಲಿಂಗಗಳ ಬೃಹತ್ ಶೋಭಾ ಯಾತ್ರೆ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ಇಂದು ಮಲೇಬೆನ್ನೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ 108 ಶಿವಲಿಂಗಗಳ ಬೃಹತ್ ಶೋಭಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 8 ಗಂಟೆಗೆ ಮಲೇಬೆನ್ನೂರಿನ ನೀರಾವರಿ ಇಲಾಖೆ ಆವರಣದಿಂದ ಶೋಭಾಯಾತ್ರೆ ಆರಂಭವಾಗಿ ಅಲ್ಲಿಂದ ಕೊಮಾರನಹಳ್ಳಿ, ಹಾಲಿವಾಣ, ಹರಳಹಳ್ಳಿ, ಯರಲಬನ್ನಿಕೋಡು, ಮಲ್ಲನಾಯ್ಕನಹಳ್ಳಿ, ನೆಹರು ಕ್ಯಾಂಪ್, ಬೂದಿಹಾಳ್, ಕುಣೆಬೆಳಕೆರೆ, ನಿಟ್ಟೂರು, ಕುಂಬಳೂರು ಮಾರ್ಗವಾಗಿ ಮಧ್ಯಾಹ್ನ 1 ಗಂಟೆಗೆ ಮಲೇಬೆನ್ನೂರಿಗೆ ಆಗಮಿಸಲಿದೆ. ಈ ವೇಳೆ ಶೋಭಾಯಾತ್ರೆಗೆ ಹೆಲಿಕ್ಯಾಪ್ಟರ್ ಮೂಲಕ ಪುಷ್ಪಾರ್ಚನೆ ಮಾಡಲಾಗುವುದು. ಜೊತೆಗೆ ಹೆಲಿಕ್ಯಾಪ್ಟರ್ ಮೂಲಕ ಶಿವಸಂದೇಶ ಸಾರುವ ಕರ ಪತ್ರಗಳನ್ನು ಮಲೇಬೆನ್ನೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಾಕಲಾಗುವುದು.

ಮಧ್ಯಾಹ್ನ 3 ಗಂಟೆ ನಂತರ ಶೋಭಾಯಾತ್ರೆಯು ಮಲೇಬೆನ್ನೂರಿನಿಂದ ಜಿಗಳಿ, ಯಲವಟ್ಟಿ, ಲಕ್ಕಶೆಟ್ಟಿಹಳ್ಳಿ, ಹೊಳೆಸಿರಿಗೆರೆ, ಕೆ.ಎನ್. ಹಳ್ಳಿ, ಕೊಕ್ಕನೂರು, ಹಳ್ಳಿಹಾಳ್, ಜಿ. ಬೇವಿನಹಳ್ಳಿ, ವಡೆಯರ ಬಸಾಪುರ ಗ್ರಾಮಗಳಲ್ಲಿ ಸಂಚರಿಸಿ, ಸಂಜೆ 7 ಗಂಟೆ ಸುಮಾರಿಗೆ ಮಲೇಬೆನ್ನೂರಿನ ವೀರಭದ್ರೇಶ್ವರ ದೇವಸ್ಥಾನ ತಲುಪಲಿದ್ದು, ಇದೇ ದಿನಾಂಕ 22ರವರೆಗೆ ಭಕ್ತರ ದರ್ಶನಕ್ಕಾಗಿ 108 ಶಿವಲಿಂಗಗಳನ್ನು ದೇವಸ್ಥಾನದಲ್ಲಿಯೇ ಇಡಲಾಗುವುದೆಂದು ಎಂದು ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾಜೀ ತಿಳಿಸಿದ್ದಾರೆ.

## ಡಿಸಿಎಂ ಟೌನ್‌ಶಿಪ್‌ನಲ್ಲಿ ಇಂದು 19ನೇ ವರ್ಷದ ಮಹಾಶಿವರಾತ್ರಿ



ಡಿಸಿಎಂ ಟೌನ್‌ಶಿಪ್ ನಾಗರಿಕರ ಸಂಘದಿಂದ ಇಂದು 19ನೇ ವರ್ಷದ ಮಹಾಶಿವರಾತ್ರಿ ಜಾಗರಣೆ, ಹಬ್ಬದ ಭಕ್ತಿ ಸಿಂಚನ-ಸಾಂಸ್ಕೃತಿಕ ವೈಭವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡಿಸಿಎಂ ಟೌನ್‌ಶಿಪ್‌ನಲ್ಲಿರುವ ಶ್ರೀ ರಾಜನಹಳ್ಳಿ ಹನುಮಂತಪ್ಪನವರ ಉದ್ಯಾನ ವನದಲ್ಲಿ ಸಂಜೆ 7.30 ಗಂಟೆಗೆ ಶಿವರಾತ್ರಿ ಮಹಾಪೂಜೆ ಹಾಗೂ ರಾತ್ರಿ 8 ಗಂಟೆಯಿಂದ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಡಿಸಿಎಂ ಟೌನ್‌ಶಿಪ್ ನಾಗರಿಕರ ಸಂಘದ ಅಧ್ಯಕ್ಷ ಕೆ. ಹಾಲಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಮಹಾಪೌರ ಎಸ್.ಟಿ. ವೀರೇಶ್ ಉಪಸ್ಥಿತರಿರುವರು. ಕಸಾಪ ನಿಕಟಪೂರ್ವ ಅಧ್ಯಕ್ಷ ಹೆಚ್.ಎಸ್. ಮಂಜುನಾಥ ಕುರ್ಕಿ ಉಪನ್ಯಾಸ ನೀಡಲಿದ್ದಾರೆ.

ರಾಣೇಬೆನ್ನೂರಿನ ಜನನಿ ಜಾನಪದ ಕಲಾ ವೇದಿಕೆಯ ಕಲಾ ತಂಡದಿಂದ ಜಾನಪದ ಹಾಗೂ ಭಕ್ತಿ ಪ್ರಧಾನ ಕಾರ್ಯಕ್ರಮ ನಡೆಯಲಿದೆ.

ಡಿಸಿಎಂ ಟೌನ್‌ಶಿಪ್ ನಾಗರಿಕರ ಸಂಘದ ಗೌರವಾಧ್ಯಕ್ಷ ಟಿ. ಮೂಡಲಗಿರಿಯಪ್ಪ, ಉಪಾಧ್ಯಕ್ಷರಾದ ಕೆ.ಹೆಚ್. ಮಂಜುನಾಥರೆಡ್ಡಿ, ಕೆ.ಯು. ನಿರಂಜನ್, ಟಿ.ಆರ್. ಪದ್ಮಪ್ರಿಯ, ಕಾರ್ಯದರ್ಶಿ ಎಸ್. ಶಿವನಪ್ಪ, ಖಜಾಂಚಿ ಡಿ.ಹೆಚ್. ಚನ್ನಬಸಪ್ಪ, ಸಂಘಟನಾ ಕಾರ್ಯದರ್ಶಿಗಳಾದ ದ್ಯಾಮನಗೌಡ್ರು, ರಮೇಶ್ ಕುಲಕರ್ಣಿ, ಚನ್ನವೀರ ಶೆಟ್ರು, ಶ್ರೀಮತಿ ಎಂ. ಶಾಂತಕುಮಾರಿ, ಬಸವರಾಜ ಅಂಗಡಿ ಹಾಗೂ ಇತರರು ಉಪಸ್ಥಿತರಿರುವರು.

## ಶಿವರಾತ್ರಿ ವಿಶೇಷ ಪೂಜೆ

ಶಿವಕುಮಾರಸ್ವಾಮಿ ಬಡಾವಣೆಯ 2 ನೇ ಮುಖ್ಯರಸ್ತೆಯಲ್ಲಿರುವ ಶ್ರೀ ಈಶ್ವರ-ವಿನಾಯಕ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ದೇವರಿಗೆ ಅಭಿಷೇಕ, ಸಂಜೆ ವಿಶೇಷ ಹೂವಿನ ಅಲಂಕಾರ ಮತ್ತು ವಿಶೇಷ ಪೂಜೆ ನಡೆಯಲಿದೆ ಎಂದು ಈಶ್ವರ ವಿನಾಯಕ ಟ್ರಸ್ಟ್ ಕಾರ್ಯದರ್ಶಿ ಎನ್.ಎಂ. ಗಿರಿಯಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಬ್ರಹ್ಮಾಕುಮಾರೀಸ್ ಸಂಸ್ಥೆಯಿಂದ ವಿಶಿಷ್ಟ ಶಿವರಾತ್ರಿ ಕಾರ್ಯಕ್ರಮ

ಭಾರತೀಯರು ಆಚರಿಸಲ್ಪಡುವ ಎಲ್ಲಾ ಹಬ್ಬಗಳಿಗಿಂತಲೂ ಸರ್ವ ಶ್ರೇಷ್ಠ ಎನಿಸಿಕೊಂಡಿರುವ ಮಹಾಶಿವರಾತ್ರಿ ವಿಶೇಷ ಮಹತ್ವವನ್ನು ಪಡೆದುಕೊಂಡಿದ್ದು, ಈ ಹಬ್ಬವನ್ನು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ವಿಶಿಷ್ಟವಾಗಿ ಆಚರಿಸುತ್ತಿದೆ.

ಈಶ್ವರೀಯ ವಿಶ್ವವಿದ್ಯಾಲಯವು ದಾವಣಗೆರೆ ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಹೊಂದಿರುವ ಸುಮಾರು 60ಕ್ಕೂ ಹೆಚ್ಚು ಗೀತಾ ಪಾಠಶಾಲೆಗಳಲ್ಲಿ ಪ್ರತೀ ದಿನವೂ ಒಂದೊಂದು ಕಡೆಯಂತೆ ಒಂದೂವರೆ ತಿಂಗಳುಗಳ ಕಾಲ ಶಿವರಾತ್ರಿ ಹಬ್ಬವನ್ನು ನಡೆಸುವುದರ ಮೂಲಕ ಅದರ ಅಧ್ಯಾತ್ಮಿಕ ರಹಸ್ಯವನ್ನು ಸಾರ್ವಜನಿಕರಿಗೆ ತಿಳಿಸುವ ಕಾರ್ಯ ಮಾಡುತ್ತಿದೆ.

ಶಿವಲಿಂಗಗಳೊಂದಿಗೆ ವಿಶ್ವ ಸದ್ಭಾವನಾ ಶಾಂತಿ ಯಾತ್ರೆಯನ್ನು ಇಂದು ಆಯೋಜಿಸಲಾಗಿದ್ದು, ಈ ಸಂದರ್ಭದಲ್ಲಿ ನಗರದೆಲ್ಲೆಡೆ ಹಾರಾಟ ಮಾಡುವ ಹೆಲಿಕ್ಯಾಪ್ಟರ್ ಮೂಲಕ ಶಿವರಾತ್ರಿ ಅರ್ಥಾತ್ ಪರಮಾತ್ಮನ ಸಂದೇಶವಿರುವ ಕರ ಪತ್ರಗಳ ವಿತರಣೆ ಮತ್ತು ಪುಷ್ಪ ವೃಷ್ಟಿ ಮಾಡಲಾಗುತ್ತದೆ.

ಇಂದು ಸಂಜೆ 4 ಗಂಟೆಗೆ ಮೋತಿ ವೀರಪ್ಪ ಪದವಿ ಪೂರ್ವ ಸರ್ಕಾರಿ ಕಾಲೇಜಿನ ಮೈದಾನದಿಂದ ಆರಂಭಗೊಳ್ಳುವ ಶಾಂತಿಯಾತ್ರೆಯು ರಾಜಬೀದಿಗಳಲ್ಲಿ ಸಂಚರಿಸಲಿದೆ ಎಂದು ಸಂಸ್ಥೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಶಿವರಾತ್ರಿ' ಎಂಬ ಶಬ್ಧದಲ್ಲಿ 'ರಾತ್ರಿ' ಎಂಬ ಪದವು ಅಜ್ಞಾನ, ಅಂಧಕಾರವನ್ನು ಸೂಚಿಸುತ್ತದೆ. ವರ್ತಮಾನ ಸಮಯದಲ್ಲಿ ನೈತಿಕ, ಮಾನವೀಯ ಹಾಗೂ ಅಧ್ಯಾತ್ಮಿಕ ಮೌಲ್ಯಗಳು ಪಾತಾಳಕ್ಕೆ ಕುಸಿದಿವೆ. ಮನಸ್ಸು ವಿಕೃತ ಗುಣಗಳಿಂದ ದೂಷಿತವಾಗಿದೆ. ಶಾಸ್ತ್ರಗಳಲ್ಲಿ ಇದನ್ನೇ 'ಧರ್ಮಗ್ಲಾನಿ' ಅಥವಾ 'ಅಜ್ಞಾನದ ರಾತ್ರಿ' ಎಂದು ವರ್ಣಿಸಲಾಗಿದೆ. ಜಗತ್ತಿನಲ್ಲಿರುವ ದುಃಖ - ಅಶಾಂತಿ ಮತ್ತು ಅಧರ್ಮವನ್ನು ತೊಡೆದು ಹಾಕಿ ಸದ್ಧರ್ಮವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಪರಂಜ್ಯೋತಿ ಸ್ವರೂಪನಾದ ಪರಮಾತ್ಮ ಶಿವತಂದೆ ಪುನಃ ಅವತರಿತ ನಾಗಿದ್ದಾನೆ. ಮನುಷ್ಯಾತ್ಮರೆಲ್ಲರೂ ಪ್ರೀತಿಯಿಂದ ಅವನನ್ನು ನೆನಪು ಮಾಡಿದಾಗಲೇ ಸುಖ-ಶಾಂತಿಯನ್ನು ಅವನಿಂದ ಪಡೆಯಲು ಸಾಧ್ಯ. ಇದೇ ಸಹಜ ರಾಜ ಯೋಗವಾಗಿದೆ. ಈ ಸಂದೇಶವನ್ನು ಸಾರುವ ಸದುದ್ದೇಶದಿಂದ ಬ್ರಹ್ಮಾಕುಮಾರಿ ಸಂಸ್ಥೆಯು ಮಹಾಶಿವರಾತ್ರಿಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದೆ ಎಂದು ಹೇಳಿದರು.

ವಿಶ್ವವನ್ನು ಪರಿವರ್ತಿಸುವ ನಿಟ್ಟಿನಲ್ಲಿ 87 ವರ್ಷಗಳ ಹಿಂದೆ ಜ್ಯೋತಿರ್ಬಿಂದು ಸ್ವರೂಪನಾಗಿರುವ ಶಿವಪರಮಾತ್ಮನೇ ಸ್ವಯಂ ಸ್ಥಾಪಿಸಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ಜಗತ್ತಿನಾದ್ಯಂತ ಸೇವೆ ಸಲ್ಲಿಸುತ್ತಿದೆ. ಈ ಸಂಸ್ಥೆಯು ದಾವಣಗೆರೆಯಲ್ಲಿ 1974ರಲ್ಲಿ ಸ್ಥಾಪಿತಗೊಂಡಿದ್ದು, ಇದೀಗ 50 ವರ್ಷಗಳ ಸಂಭ್ರಮಾಚರಣೆಯಲ್ಲಿದೆ. ಇದನ್ನು ವಿಶಿಷ್ಟವನ್ನಾಗಿಸುವ ದಿಸೆಯಲ್ಲಿ ಹೆಲಿಕ್ಯಾಪ್ಟರ್ ಮೂಲಕ ಪರಮಾತ್ಮನ ಸಂದೇಶವಿರುವ ಕರಪತ್ರವನ್ನು ಹಂಚಲಾಗುವುದು ಎಂದು ಅವರು ವಿವರಿಸಿದರು.

ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಅವರ ಸಹಕಾರದಿಂದ ಹೆಲಿಕ್ಯಾಪ್ಟರ್ ಸೇವೆ ನಡೆಯುತ್ತಿದೆ ಎಂದು ಲೀಲಾಜಿ ತಿಳಿಸಿದರು.

## ಕೆಇಎಯಿಂದ ವಿವಿಧ ಪರೀಕ್ಷೆಗಳ ಫಲಿತಾಂಶ ಪ್ರಕಟ

ಬೆಂಗಳೂರು, ಮಾ. 7 - ಕಿಯೋನಿಕ್ಸ್ ಸೇರಿದಂತೆ ವಿವಿಧ ನಿಗಮಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅ.28 ರಿಂದ ನ.25ರವರೆಗೆ ನಡೆಸಿದ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಈ ವಿಷಯವನ್ನು ತಿಳಿಸಿರುವ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರು, ಕೆಇಎ ವೆಬ್ ಸೈಟ್‌ನಲ್ಲಿನ ಲಿಂಕ್‌ನಲ್ಲಿ ಫಲಿತಾಂಶ ಪಡೆಯಬಹುದು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮಗಳ ಒಟ್ಟು 670 ಖಾಲಿ ಹುದ್ದೆಗಳಿಗೆ ಕೆಇಎ ಪರೀಕ್ಷೆ ನಡೆಸಿತ್ತು.

ಈ ಎಲ್ಲ ಪರೀಕ್ಷೆ ಗಳಿಗೆ ಅಂದಾಜು 17.5 ಲಕ್ಷ ಅರ್ಜಿಗಳು ಬಂದಿದ್ದವು. ಅನೇಕರು, ವಿವಿಧ ಹುದ್ದೆಗಳಿಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದ ಕಾರಣ ಅವುಗಳ ಸಂಖ್ಯೆ ಜಾಸ್ತಿ ಆಗಿತ್ತು. 8 ಲಕ್ಷ ಮಂದಿ ಪರೀಕ್ಷೆ ಬರೆದಿದ್ದು ಅಷ್ಟೂ ಮಂದಿಯ ಅಂಕಗಳನ್ನು ಪ್ರಕಟಿಸಲಾಗಿದೆ.

ಕೆಇಎ ವೆಬ್ ಸೈಟ್ ನಲ್ಲಿನ ಲಿಂಕ್ ಗೆ ಹೋಗಿ ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಫಲಿತಾಂಶದ ವಿವರಗಳನ್ನು ಪಡೆಯಬಹುದು. ಒಂದು ವೇಳೆ ಫಲಿತಾಂಶ ಸಿಗದಿದ್ದಲ್ಲಿ ಅದೇ ಲಿಂಕ್ ನಲ್ಲಿ ಆಕ್ಷೇಪಣೆ ಸಲ್ಲಿಸುವುದಕ್ಕೂ ಅವಕಾಶ ಕಲ್ಪಿಸಲಾಗಿದೆ. ಬಳಿಕ ಅದನ್ನು ಪರಿಶೀಲಿಸಿ ಫಲಿತಾಂಶ ನೀಡಲಾಗುತ್ತದೆ. ಫಲಿತಾಂಶ ಕುರಿತು ಯಾವುದೇ ಆಕ್ಷೇಪಣೆ ಇದ್ದರೂ ಲಿಂಕ್ ಮೂಲಕವೇ ಸಲ್ಲಿಸಬೇಕು ಎಂದು ಅವರು ಹೇಳಿದರು.

## ನಗರದಲ್ಲಿ ಇಂದು ಶಿವಸ್ಮರಣೆ ನೃತ್ಯ ಜಾಗರಣೆ

ದಾವಣಗೆರೆ, ಮಾ.7- ನಮನ ಅಕಾಡೆಮಿಯಿಂದ ನಾಳೆ ದಿನಾಂಕ 8ರ ಶುಕ್ರವಾರ ನಡೆಯಲಿರುವ ಶಿವರಾತ್ರಿ ಹಬ್ಬದಂದು ವಿದುಷಿ ಮಾಧವಿ ಡಿ.ಕೆ. ಹಾಗೂ ಅವರ ಶಿಷ್ಯಂದಿರಿಂದ ಶಿವಸ್ಮರಣೆ ನೃತ್ಯ ಜಾಗರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ನಮನ ಅಕಾಡೆಮಿ ಉಪಾಧ್ಯಕ್ಷ ದಿನೇಶ್ ಕೆ.ಶೆಟ್ಟಿ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ರಾತ್ರಿ 9.30ಕ್ಕೆ ರಿಂಗ್ ರಸ್ತೆಯಲ್ಲಿರುವ ಶ್ರೀ ಶಾರದಾ ಮಂದಿರದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಶ್ರೀ ಶಂಕರ ಸೇವಾ ಸಂಘದ ಅಧ್ಯಕ್ಷ ಡಾ.ಬಿ.ಟಿ. ಅಚ್ಯುತ್ ಭಾಗವಹಿಸಲಿದ್ದಾರೆ. ಅಕಾಡೆಮಿಯ ಗೌರವಾಧ್ಯಕ್ಷ ಡಾ.ಎ.ಎಂ. ಶಿವಕುಮಾರ್, ಆರ್.ಎಲ್. ನಾಗಭೂಷಣ್ ಉಪಸ್ಥಿತರಿರಲಿದ್ದಾರೆ ಎಂದರು.

ರಾತ್ರಿ 11 ಕ್ಕೆ ಜಯದೇವ ವೃತ್ತದಲ್ಲಿರುವ ಶಂಕರ ಮಠದಲ್ಲಿ, ರಾತ್ರಿ 12.30ಕ್ಕೆ ಶ್ರೀ ಲಿಂಗೇಶ್ವರ ದೇವಸ್ಥಾನ ಹಾಗೂ ರಾತ್ರಿ 2 ಗಂಟೆಗೆ ವಿದ್ಯಾನಗರದ ಶ್ರೀ ಶಿವ ಪಾರ್ವತಿ ದೇವಸ್ಥಾನದಲ್ಲಿ ನೃತ್ಯ ಸೇವೆ ಮಾಡುವ ಮೂಲಕ ಶಿವನಿಗೆ ನೃತ್ಯ ಜಾಗರಣೆ ಸಮರ್ಪಿಸಲಾಗುತ್ತದೆ.

ಪತ್ರಿಕಾಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷ ಗೋಪಾಲಕೃಷ್ಣ ಕೆ.ಎನ್., ಅಕಾಡೆಮಿಯ ಗುರುಗಳಾದ ವಿದುಷಿ ಡಿ.ಕೆ. ಮಾಧವಿ, ವಿದ್ಯಾರ್ಥಿಗಳಾದ ನೀಲು ಅರೋರ್, ಕು.ಋತು ಹಿರೇಮಠ್, ಸಂಜನ ಉಪಸ್ಥಿತರಿದ್ದರು.

## ನಗರದ ಅಥಣಿ ಕಾಲೇಜು ಆವರಣದಲ್ಲಿರುವ ಶಿವನ ಮೂರ್ತಿಗೆ ಇಂದು ಅಭಿಷೇಕ, ಪೂಜೆ

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಅಥಣಿ ಪದವಿ ಪೂರ್ವ ಕಾಲೇಜು, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು, ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ಇವುಗಳ ಸಂಯುಕ್ತಾಶ್ರಯದಲ್ಲಿ ಅಥಣಿ ಕಾಲೇಜು ಆವರಣದಲ್ಲಿರುವ ಶಿವನ ಮೂರ್ತಿಗೆ ಸಂಜೆ 6 ಗಂಟೆಯಿಂದ ಶಿವರಾತ್ರಿ ಹಬ್ಬದ ಆಚರಣೆ ಅಂಗವಾಗಿ ಅಭಿಷೇಕ, ಅಗ್ನಿಹೋತ್ರ ಮತ್ತು ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ವಿವಿಧ ಕಲಾವಿದರಿಂದ, ಶಾಲಾ ಕಾಲೇಜು ವಿದ್ಯಾರ್ಥಿ ಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ವೀಣಾ ವಾದನ ಕಾರ್ಯಕ್ರಮಗಳನ್ನು, ಮೈಸೂರಿನ ಪ್ರಸಿದ್ದ ವಾಗ್ಮಿಗಳಾದ ಭರಮಪ್ಪನವರಿಂದ ಶಿವರಾತ್ರಿ ಮಹಾತ್ಮೆ ಪ್ರವಚನ ಕಾರ್ಯಕ್ರಮವನ್ನು, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಯೋಗ ಬಂಧುಗಳಿಂದ ಭಜನಾ ಕಾರ್ಯಕ್ರಮದೊಂದಿಗೆ ರಾತ್ರಿ ಜಾಗರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

## ನಗರದಲ್ಲಿಂದು ಪಾಧ್ಯ, ಅರ್ಘ್ಯ, ಅಚಮನ, ಬಿಲ್ವಪತ್ರೆ ಉಚಿತ ವಿತರಣೆ

ಮಹಾಶಿವರಾತ್ರಿ ಪ್ರಯುಕ್ತ ರುದ್ರಾಭಿಷೇಕಕ್ಕೆ ಬೇಕಾಗುವ ಪಾಧ್ಯ, ಅರ್ಘ್ಯ, ಅಚಮನ, ಬಿಲ್ವಪತ್ರೆಯನ್ನು ಇಂದು ಉಚಿತವಾಗಿ ವಿತರಣೆ ಮಾಡಲಾಗುವುದು. ಆಸಕ್ತರು ಎಂ. ವೀರಣ್ಣ, ಶ್ರೀ ಗುರು ರೇವಣ ಸಿದ್ದೇಶ್ವರ ನಿವಾಸ, ಡೋರ್ ಸಂಖ್ಯೆ 451/2, 16 ನೇ ತಿರುವು, 2 ನೇ ಮುಖ್ಯರಸ್ತೆ, ಕೆಟಿಜೆ ನಗರ, ದಾವಣಗೆರೆ (9740305683) ಇವರನ್ನು ಸಂಪರ್ಕಿಸಬಹುದು.

## ಕೆಟಿಜೆ ನಗರದಲ್ಲಿಂದು ಶಿವರಾತ್ರಿ

ಕೆಟಿಜೆ ನಗರ 10ನೇ ಕ್ರಾಸ್‌ನಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ 7 ಗಂಟೆಗೆ ಮಹಾಶಿವರಾತ್ರಿಯ ವಿಶೇಷ ಪೂಜೆಗಳು ನಡೆಯಲಿವೆ ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

## ಬಿಲ್ವಪತ್ರೆ, ಹಸುವಿನ ಹಾಲು ವಿತರಣೆ

ಶಿವರಾತ್ರಿ ಪ್ರಯುಕ್ತ ಬಿಲ್ವಪಾತ್ರೆ, ಅಭಿಷೇಕಕ್ಕೆ ಹಸುವಿನ ಹಾಲನ್ನು ವಿನೋಬನಗರ 4ನೇ ಮುಖ್ಯ ರಸ್ತೆ, ಪಾರ್ಕ್ ಹತ್ತಿರ ಇಲ್ಲಿ ಉಚಿತವಾಗಿ ವಿತರಣೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9964241490ಗೆ ದಾವಣಗೆರೆ ತಾಲ್ಲೂಕು ಅಧ್ಯಕ್ಷ, ರೈತ ಸಂಘ, ಹಸಿರು ಸೇನೆ, ಮಂಡಲೂರು ವಿಶ್ವನಾಥ್ ಇವರನ್ನು ಸಂಪರ್ಕಿಸಬಹುದು.

## ವಿದ್ಯಾನಗರ ಈಶ್ವರ, ಪಾರ್ವತಿ, ಗಣಪತಿ ದೇವಸ್ಥಾನದಲ್ಲಿ ಶಿವರಾತ್ರಿ ಕಾರ್ಯಕ್ರಮ



ದಾವಣಗೆರೆ ವಿದ್ಯಾನಗರದ ಶ್ರೀ ಈಶ್ವರ, ಪಾರ್ವತಿ, ಗಣಪತಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಗಿನ ಜಾವ 5 ಗಂಟೆಗೆ ಶಿವನಿಗೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಜರುಗಲಿದ್ದು, ಸಂಜೆ 7 ಕ್ಕೆ ವಿದ್ಯಾನಗರದ ಶ್ರೀ ಗುರು ವಚನ ಸಂಸ್ಥೆ, ಆರೋಹಿ ಸಂಗೀತ ಕಲಾ ಸಂಸ್ಥೆ, ಶರಧಿ ಸಂಗೀತ ಪಾಠಶಾಲೆಯ ಶೋಭಾ, ಅನುಷ ಮತ್ತು ಸಂಗಡಿಗರು, ಈಶ್ವರ ಪಾರ್ವತಿ ಗಣಪತಿ ಮಹಿಳಾ ಸಂಘದವರಿಂದ ಸುಗಮ ಸಂಗೀತ, ನಗರದ ಅದಮ್ಯ ಸಂಗೀತ ಸಂಸ್ಥೆಯ ವಿದುಷಿ ಗೀತಾ ಮಾಲತೇಶ, ಸಂಗೀತ ಶಿಕ್ಷಕಿ ಅರುಣಾದೇವಿ ಮದಾನೆ ಇವರಿಂದ ವೀಣಾ ವಾದನ, ಶಾರದಾ ಮಹಿಳಾ ಮಂಡಳಿಯವರಿಂದ ಸಂಗೀತ, ಡಿ.ಆರ್. ದಕ್ಷಾ ಅವರಿಂದ ಕೀಬೋರ್ಡ್ ವಾದನ ನಡೆಯಲಿದೆ.

ಗುಲ್ಬರ್ಗಾ ಆಕಾಶವಾಣಿ ಕಲಾವಿದ ಸಂಗಮೇಶ ಪಾಟೀಲ ಅವರಿಂದ ವಿಶೇಷ ಸಂಗೀತ ಕಾರ್ಯಕ್ರಮ, ರಾತ್ರಿ 1 ಗಂಟೆಗೆ ನಮನ ಅಕಾಡೆಮಿಯ ವಿದುಷಿ ಡಿ.ಕೆ. ಮಾಧವಿ ಮತ್ತು ಶಿಷ್ಯರಿಂದ ಶಿವಸ್ಮರಣೆ ನೃತ್ಯ, ದೇವಸ್ಥಾನದ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಆಕಾಶವಾಣಿ ಕಲಾವಿದರಾದ ಸುರೇಶ ಕೊಪ್ಪಳ, ಶೇಖರ ಇಮ್ಮಡಿ ತಬಲಾ ಸಾಥ್ ನೀಡಲಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಬೆಳವನೂರು ನಾಗರಾಜಪ್ಪ, ನಿಕಟ ಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಶಿವರಾತ್ರಿ ಜಾಗರಣೆ, ಸಂಗೀತ, ಭಕ್ತಿ ಗಾಯನ



ಭದ್ರಕಾಳಿ ಸಹಿತ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಸಂಜೆ 6.30 ರಿಂದ ವೇ. ಬೆನಕಯ್ಯ ಶಾಸ್ತ್ರಿಗಳ ನೇತೃತ್ವದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ಕ್ಷೀರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ ಪೂಜೆ ನೆರವೇರಲಿದ್ದು, ನಂತರ ಶ್ರೀ ವೀರಭದ್ರೇಶ್ವರ ಗುರುಕುಲ ಮಾತೆಯವರಿಂದ ರುದ್ರ ಪಾರಾಯಣ ನಡೆಯಲಿದೆ.

ರಾತ್ರಿ 9 ಗಂಟೆಯಿಂದ ಉಡುಪಿಯ ಕಲಾ ಸಿಂಧು ಸುಗಮ ಸಂಗೀತ ತಂಡದಿಂದ ಮತ್ತು ಜಾನಪದ ಗಾಯಕರಾದ ಶ್ರೀಮತಿ ಕಲಾವತಿ ದಯಾನಂದ ಇವರಿಂದ ಸಂಗೀತ ಭಕ್ತಿ ಗಾಯನದ ಮೂಲಕ ಶಿವರಾತ್ರಿ ಜಾಗರಣೆ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಉಪಾಧ್ಯಕ್ಷ ಬಿ. ಚಿದಾನಂದಪ್ಪ ತಿಳಿಸಿದ್ದಾರೆ.


## ನಗರದ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಇಂದು - ನಾಳೆ ವಿಶೇಷ ಕಾರ್ಯಕ್ರಮ

ಕನ್ನಿಕಾಪರಮೇಶ್ವರಿ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಮತ್ತು ನಾಳೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ ಪೂಜೆ, ಸಂಜೆ 8.30 ರಿಂದ ಮಹಾಪೂಜೆ, ಜಾಗರಣೆ, ಪಳಾರದ ವ್ಯವಸ್ಥೆ ಹಾಗೂ ರಾತ್ರಿ 10.30 ರಿಂದ ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

ನಾಳೆ ಶನಿವಾರ ಬೆಳಿಗ್ಗೆ 9 ಕ್ಕೆ ಕುಲದೇವರಾದ ಶ್ರೀ ಮಾರ್ಕಂಡೇಶ್ವರಸ್ವಾಮಿಯ ಉತ್ಸವ ನಡೆಯಲಿದ್ದು, ಮಧ್ಯಾಹ್ನ 12.30 ಕ್ಕೆ ಶ್ರೀ ಪ್ರಭುಲಿಂಗಸ್ವಾಮಿಗಳವರಿಂದ ಆಶೀರ್ವಚನ ನಡೆಯಲಿದೆ. ಮಧ್ಯಾಹ್ನ 1.30 ಕ್ಕೆ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಪಿ.ಜೆ.ನಾಗರಾಜ್ ತಿಳಿಸಿದ್ದಾರೆ.



## ನಗರದ ಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಶಿವರಾತ್ರಿ



ದಾವಣಗೆರೆ ಅಶೋಕ ಚಿತ್ರ ಮಂದಿರದ ಬಳಿಯ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಶ್ರೀ ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮತ್ತು ಪೂಜೆಗಳು ಏರ್ಪಾಡಾಗಿವೆ.

## ನ್ಯಾಯಮೂರ್ತಿ ಬಿಜೆಪಿಗೆ ಸೇರ್ಪಡೆ

ಕೊಲ್ಕೊತಾ, ಮಾ. 7 – ಕಲ್ಕತ್ತಾ ಹೈಕೋರ್ಟ್ ನ್ಯಾಯ ಮೂರ್ತಿ ಸ್ಥಾನಕ್ಕೆ ಮೊನ್ನೆ ರಾಜೀನಾಮೆ ನೀಡಿದ್ದ ಅಭಿಜಿತ್ ಗಂಗೋಪಾಧ್ಯಾಯ್, ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಬರುವ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಯಾವುದೇ ನೇರ ಹೇಳಿಕೆ ನೀಡಿದ ಅವರು, ಪಕ್ಷ ವಹಿಸಿದ ಹೊಣೆ ನಿರ್ವಹಿಸುವುದಾಗಿ ಹೇಳಿದ್ದಾರೆ.

## ಸ್ಮಾರ್ಟ್ ಸಿಟಿ ಪ್ರಭಾರ ವ್ಯವಸ್ಥಾಪಕರಾಗಿ (ತಾಂತ್ರಿಕ) ಹೆಚ್. ಟಾಟಾಶಿವನ್



ದಾವಣಗೆರೆ, ಮಾ.7- ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಹೆಚ್. ಟಾಟಾಶಿವನ್ ಇವರನ್ನು ದಾವಣಗೆರೆ ಸ್ಮಾರ್ಟ್ ಸಿಟಿ ಕಚೇರಿಯಲ್ಲಿ ಖಾಲಿ ಇರುವ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಹುದ್ದೆಗೆ ಹೆಚ್ಚುವರಿಯಾಗಿ ಪ್ರಭಾರಿಯನ್ನಾಗಿ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅವರು ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ನಿರ್ದೇಶನದ ಮೇರೆಗೆ ನಿಯೋಜಿಸಿದ್ದಾರೆ. ಟಾಟಾಶಿವನ್ ಅವರು ಇಂದು ಹೆಚ್ಚುವರಿ ಪ್ರಭಾರಿ ಹುದ್ದೆಯ ಅಧಿಕಾರ ವಹಿಸಿಕೊಂಡಿದ್ದಾರೆ.

